# ರೋಟರಿ ಪ್ರಶಸ್ತಿ : ಕೃಷ್ಣಕುಮಾರ್ ಸಂತಸ

• ಉದಯವಾಹಿನಿ, ಬೆಂಗಳೂರು

ರೋಟರಿ ಬೆಂಗಳೂರು ವಿಶ್ವನೀಡಂ ಶಾಖೆಯು ಬೆಂಗಳೂರಿನ ಹೋಟೆಲ್ ಅಯೋಧ್ಯಾ ಪ್ಯಾಲೇಸ್ ಸಭಾಂಗಣದಲ್ಲಿ ಏರ್ಪಡಿಸಿದ್ದ 2026 –27ನೇ ಸಾಲಿನ ನೂತನ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಕಲಿಯುಗದ ಶ್ರವಣ ಕುಮಾರ ಖ್ಯಾತಿಯ ಡಿ ಕೃಷ್ಣಕುಮಾರ್ ರವರಿಗೆ ಕೌಶಲ್ಯ ಶ್ರೇಷ್ಠತಾ ಸೇವಾ ರತ್ನ ಪ್ರಶಸ್ತಿಯನ್ನು ಬಹಳ ಆತ್ಮೀಯವಾಗಿ ಪ್ರಧಾನ ಮಾಡಲಾಯಿತು ನಂತರ ಮಾತನಾಡಿದ ಕೃಷ್ಣಕುಮಾರ್ ಒಳಿತಿಗಾಗಿ ಒಂದಾಗೋಣ ಎನ್ನುವ ಘೋಷವಾಕ್ಯದೊಂದಿಗೆ ಆಡು ಮುಟ್ಟದ ಸೊಪ್ಪಿಲ್ಲ ಎನ್ನುವ ಹಾಗೆ ರೋಟರಿಯ ಯೋಜನೆಗಳು ಸಮಾಜದ ಕಟ್ಟ ಕಡೆಯ ವ್ಯಕ್ತಿಯನ್ನು ಸಹ ಫಲಾನುಭವಿಗಳನ್ನಾಗಿ ಮಾಡುತ್ತಿದೆ ಇಂತಹ ಸರ್ವರನ್ನು ಮುಟ್ಟುವ ಕಾರ್ಯಗಳು ಮುಂದೆಯೂ ಕೂಡ ಹೆಚ್ಚಾಗಲಿ ಎಂದು ಆಶಿಸಿದರು ವಿವಿಧಡೆಗಳಿಂದ ಆಗಮಿಸಿದ್ದ ಗಣ್ಯಮಾನ್ಯ ರೋಟರಿ ಬಂಧುಗಳು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

# ಬಹಿರಂಗವಾಗಿ ಬೇಸರ ವ್ಯಕ್ತಪಡಿಸಿದ ಗಾಯಕಿ ಅನುರಾಧಾ ಭಟ್!

• ಉದಯವಾಹಿನಿ, ಬೆಂಗಳೂರು

ಖ್ಯಾತ ಹಿನ್ನೆಲೆ ಗಾಯಕಿ ಅನುರಾಧಾ ಭಟ್ ಅವರು ತಮ್ಮ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿರುವ ನಕಾರಾತ್ಮಕ ಪ್ರಚಾರ ಹಾಗೂ ಹರಿದಾಡುತ್ತಿರುವ ಅವಹೇಳನಕಾರಿ ಕಮೆಂಟ್‌ಗಳ ವಿರುದ್ಧ ಸುದೀರ್ಘ ಸ್ಪಷ್ಟೀಕರಣ ನೀಡುವ ಮೂಲಕ ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಹಿರಿಯ ಗಾಯಕಿ ಎಸ್. ಜಾನಕಿ ಅವರೊಂದಿಗಿನ ತಮ್ಮ ಬಾಂಧವ್ಯವನ್ನು ಪ್ರಶ್ನಿಸಿ ಟ್ರೋಲ್ ಮಾಡುತ್ತಿರುವವರಿಗೆ ಅವರು ಖಡಕ್ ಉತ್ತರ ನೀಡಿದ್ದಾರೆ.

ಜೀ ಕನ್ನಡ ವಾಹಿನಿಯಲ್ಲಿ ಜಾನಕಿ ಅಮ್ಮನವರ ಬಗ್ಗೆ ಮಾತನಾಡಿದ್ದನ್ನು ಹಾಗೂ ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಅವರ 12ನೇ ದಿನದ 'ಪುಣ್ಯಸ್ಮರಣೆ' ಕಾರ್ಯಕ್ರಮದ ಸಂಗೀತ ನಮನದಲ್ಲಿ ಭಾಗವಹಿಸಿದ್ದನ್ನು ಇಟ್ಟುಕೊಂಡು ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಅನುರಾಧಾ ಭಟ್ ಅವರ ವಿರುದ್ಧ ಕೆಟ್ಟದಾಗಿ ಕಾಮೆಂಟ್ ಮಾಡುತ್ತಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ನನ್ನ ಬಗ್ಗೆ ಬರುವ ನಕಾರಾತ್ಮಕ ಪ್ರತಿಕ್ರಿಯೆಗಳು, ಟೀಕೆಗಳು ಅಥವಾ ಅನಗತ್ಯ ಮಾತುಗಳಿಗೆ ನಾನು ಸಾಮಾನ್ಯವಾಗಿ ಎಂದಿಗೂ ಉತ್ತರಿಸುವುದಿಲ್ಲ. ಇಷ್ಟು ವರ್ಷಗಳ ನನ್ನ ವೃತ್ತಿಜೀವನದಲ್ಲೂ ಅಂತಹ ಟೀಕೆಗಳಿಗೆ ಪ್ರತಿಕ್ರಿಯಿಸದೆ ನನ್ನ ಕೆಲಸವೇ ನನ್ನ ಉತ್ತರವಾಗಿರಲಿ ಎಂದು ನಂಬಿಕೊಂಡು ಬಂದಿದ್ದೇನೆ. ಆದರೆ ಈ ಬಾರಿ ವಿಷಯ ನನ್ನೊಬ್ಬಳದ್ದಲ್ಲ.

ನಾನು ಅಪಾರವಾಗಿ ಗೌರವಿಸುವ, ನನ್ನ ಗುರುಸ್ಥಾನದಲ್ಲಿರುವ ಜಾನಕಿ ಅಮ್ಮನವರ ವಿಷಯ. ಅವರ ಶಿಷ್ಯೆಯಾಗಿ, ಭಕ್ತೆಯಾಗಿ, ಅವರೊಂದಿಗಿನ ನನ್ನ ಬಾಂಧವ್ಯವನ್ನೂ, ಅವರ ಮೇಲಿನ ನನ್ನ ಪ್ರೀತಿ ಮತ್ತು ಗೌರವವನ್ನೂ ಪ್ರಶ್ನಿಸಿ ಅಪಾರ್ಥ ಕಲ್ಪಿಸುವುದನ್ನು ಕಂಡಾಗ ಮೌನವಾಗಿರಲು ನನ್ನಿಂದ ಸಾಧ್ಯವಾಗಲಿಲ್ಲ. ಅದಕ್ಕಾಗಿ ಈ ಸ್ಪಷ್ಟೀಕರಣ ಎಂದು ಅನುರಾಧಾ ಭಟ್ ಬರೆದುಕೊಂಡಿದ್ದಾರೆ.


ಉದಯವಾಹಿನಿ ಚಿತ್ರ

## ನೇಮಕಾತಿ ಸಂಬಂಧಿತ ವಿಷಯಗಳ ಕುರಿತು ಆರ್. ಅಶೋಕ್ ಟೀಕೆಗೆ ತೀವ್ರ ಆಕ್ರೋಶ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರದ ನೇಮಕಾತಿ ಸಂಬಂಧಿತ ವಿಷಯಗಳನ್ನು ನಿರ್ವಹಿಸುವ ಬಗ್ಗೆ ಟೀಕಿಸಿದ್ದ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರ ವಿರುದ್ಧ ಕರ್ನಾಟಕ ಕಾಂಗ್ರೆಸ್ ತೀವ್ರ ವಾಗ್ದಾಳಿ ನಡೆಸಿದ್ದು, ಬಿಜೆಪಿ ಅಧಿಕಾರಾವಧಿಯಲ್ಲಿಯೂ ಪ್ರಮುಖ ನೇಮಕಾತಿ ಹಗರಣಗಳು ನಡೆದಿತ್ತು ಎಂದು ಆರೋಪಿಸಿದೆ.

ಇತ್ತೀಚೆಗೆ ರಾಜ್ಯಪಾಲರಿಂದ ತಮ್ಮ ಮಗಳನ್ನು ಸರ್ಕಾರಿ ಹುದ್ದೆಗೆ ನೇಮಕ ಮಾಡಿದ ಆರೋಪದ ಮೇಲೆ ಅಮಾನತುಗೊಂಡಿದ್ದ ಮಾಜಿ ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕರ್ ಅವರನ್ನು 2019ರಲ್ಲಿ ಕರ್ನಾಟಕ ಸಾರ್ವಜನಿಕ ಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ನೇಮಕ ಮಾಡಿ 2021ರಲ್ಲಿ ಬಿಜೆಪಿ ಅಧಿಕಾರಾವಧಿಯಲ್ಲಿ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು ಎಂದು ಕಾಂಗ್ರೆಸ್ ಹೇಳಿಕೆಯಲ್ಲಿ ಆರೋಪಿಸಿದೆ.

ಪಿಎಸ್‌ಐ ನೇಮಕಾತಿ ಹಗರಣವನ್ನು ಸಹ ಪಕ್ಷವು ಉಲ್ಲೇಖಿಸಿದ್ದು, 545 ಪೊಲೀಸ್ ಸಬ್-ಇನ್‌ಸ್ಪೆಕ್ಟರ್‌ಗಳ ನೇಮಕಾತಿಯಲ್ಲಿ ನಡೆದ ಅಕ್ರಮಗಳನ್ನು ಒಳಗೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ನಾಯಕಿ ದಿವ್ಯಾ ಹಾಗರ್ಗಿ ಅವರನ್ನು ಆರೋಪಪಟ್ಟಿಯಲ್ಲಿ ಹೆಸರಿಸಲಾಗಿದೆ ಎಂದು ಆರೋಪಿಸಿದೆ.

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮತ್ತು ಉಚ್ಚಾಟಿತ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರ ಹೇಳಿಕೆಗಳನ್ನು ಕಾಂಗ್ರೆಸ್ ಉಲ್ಲೇಖಿಸಿದೆ. ಬಿಜೆಪಿಯೊಳಗಿನ ಮತ್ತು ಅದರ ಮಿತ್ರಪಕ್ಷದ ನಾಯಕರು ಸ್ವತಃ ಹಗರಣದ ನಿರ್ವಹಣೆಯ ಬಗ್ಗೆ ಆರೋಪಗಳನ್ನು ಎತ್ತಿದ್ದಾರೆ ಎಂದು ಹೇಳಿಕೊಂಡಿದೆ.

ಸರ್ಕಾರಿ ಉದ್ಯೋಗಗಳು ಮಾರಾಟವಾಗುತ್ತಿವೆಯೇ ಮತ್ತು ಕೆಪಿಎಸ್‌ಸಿ ದರ ಕಾರ್ಡ್ ಆಗಿ ಮಾರ್ಪಟ್ಟಿದೆಯೇ ಎಂಬ ಅಶೋಕ ಅವರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಕಾಂಗ್ರೆಸ್ , ನೇಮಕಾತಿ ಅಕ್ರಮಗಳು ಬಿಜೆಪಿ ಸರ್ಕಾರದ ಅವಧಿಯಲ್ಲಿ ಹುಟ್ಟಿಕೊಂಡಿವೆ ಎಂದು ಆರೋಪಿಸಿದೆ.

## ಪ್ರಜ್ವಲ್ ರೇವಣ್ಣ ಕರೆತರಲು ಕುಟುಂಬ ಯತ್ನ; ಪೆರೋಲ್ ನೀಡಲು ಸಾಧ್ಯವಿಲ್ಲ ಎಂದ ಕಾರಾಗೃಹ ಇಲಾಖೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪ್ರಥಮ ಏಕಾದಶಿ ಪ್ರಯುಕ್ತ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರು ಬೆಳಗ್ಗೆ 6:30ಕ್ಕೆ ಶ್ರೀರಾಮದೇವರ ಸಂಸ್ಥಾನ ಪೂಜೆಯನ್ನು ನೆರವೇರಿಸಿ ನಂತರ ಸುವರ್ಣದ ತೊಟ್ಟಿಲಿನಲ್ಲಿ ಶ್ರೀಮನ್ ಮೂಲ ರಾಮದೇವರಿಗೆ ಮಂಗಳಾರತಿಯನ್ನು ನೆರವೇರಿಸಿ ಸುದರ್ಶನ ಹೋಮದೊಂದಿಗೆ ತಪ್ತಮುದ್ರಾಧಾರಣೆಯನ್ನು ತಾವು ಸ್ವೀಕರಿಸಿ, ಸಹಸ್ರಾರು ಶಿಷ್ಯರಿಗೆ ಭಕ್ತರಿಗೆ ಬೆಳಗ್ಗೆ 7:30 ರಿಂದ ಮುದ್ರಾಧಾರಣೆಯನ್ನು ನೆರವೇರಿಸಿದರು.

ಬೆಳಗ್ಗೆಯಿಂದ ರಾತ್ರಿಯವರೆಗೆ ನಾಡಿನ ಪ್ರಖ್ಯಾತ ವಿದ್ವಾಂಸರುಗಳಿಂದ ಪ್ರವಚನ ಆಯೋಜಿಸಿತ್ತು. ಈ ಎಲ್ಲಾ ಕಾರ್ಯಕ್ರಮಗಳು ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀಆರ್‌ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಜರುಗಿದವು ಈ ಸಂದರ್ಭದಲ್ಲಿ ಮುದ್ರಾಧಾರಣೆ ಸ್ವೀಕರಿಸಲು ಆಗಮಿಸಿದ ಶಿಷ್ಯರಿಗಾಗಿ ಅಚ್ಚುಕಟ್ಟಾದ ವ್ಯವಸ್ಥೆಯನ್ನು ಮಾಡಲಾಗಿತ್ತು. ವಯೋವೃದ್ಧರಿಗೂ, ವಿಕಲಚೇತನರಿಗೂ ಪ್ರತ್ಯೇಕ ವ್ಯವಸ್ಥೆಯೂ ಮಾಡಲಾಗಿತ್ತು. ಈ ವ್ಯವಸ್ಥೆಯನ್ನು ಕಂಡ ಶಿಷ್ಯರು ಭಕ್ತರು ಸಂತೋಷವನ್ನು ವ್ಯಕ್ತಪಡಿಸುತ್ತಾ ಮುದ್ರಾಧಾರಣವನ್ನು ಸ್ವೀಕರಿಸಿ, ಶ್ರೀ ಹರಿವಾಯುಗುರುಗಳ ಅನುಗ್ರಹಕ್ಕೆ ಪಾತ್ರರಾದರು.

## ಶ್ರೀ ಸುಜಯನಿಧಿ ತೀರ್ಥರಿಂದ ತಪ್ತಮುದ್ರಾಧಾರಣೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಆಷಾಡ ಶುದ್ಧ ಏಕಾದಶಿ ಅಂಗವಾಗಿ ಮುಳಬಾಗಿಲು ಶ್ರೀಪಾದರಾಜಮಠದ ಪೀಠಾಧಿಪತಿ ಶ್ರೀ ಸುಜಯನಿಧಿ ತೀರ್ಥರು ತಪ್ತಮುದ್ರಾಧಾರಣೆ ಭಕ್ತರಿಗೆ ಮಾಡಿದರು.

ನಗರದ ಚಾಮರಾಜಪೇಟೆಯ ರಾಘವೇಂದ್ರ ಕಾಲೋನಿಯಲ್ಲಿರುವ ಶ್ರೀಪಾದರಾಜ ಮಠದಲ್ಲಿ ಶ್ರೀಗಳು ಬೆಳಿಗ್ಗೆ ಸುದರ್ಶನ ಹೋಮ ನೇರವೇರಿಸಿ ಅದರ ಅಗ್ನಿಯಲ್ಲಿ ಶಂಖ ಮತ್ತು ಚಕ್ರದ ಮುದ್ರೆಯನ್ನು ಕಾಯಿಸಿ ಬಂದ ಭಕ್ತರಿಗೆ ತಪ್ತಮುದ್ರಾಧಾರಣೆಯನ್ನು ಮಾಡಿದರು, ಸಾವಿರಾರು ಭಕ್ತರು ಮುದ್ರೆಯನ್ನು ಹಾಕಿಸಿಕೊಂಡು ಶ್ರೀಹರಿಯ ಮತ್ತು ಗುರುಗಳ ಆಶೀರ್ವಾದ ಪಡೆದರು.

## 2020ರ ಗಲಭೆ ಪ್ರಕರಣದ ಆರೋಪಿ ಉಮರ್ ಖಾಲಿದ್ ಪರ ಪೋಸ್ಟರ್ ಪ್ರದರ್ಶನ..!

• ಉದಯವಾಹಿನಿ, ಬೆಂಗಳೂರು

ನಗರದ ಫ್ರೀಡಂ ಪಾರ್ಕ್‌ನಲ್ಲಿ ನಡೆದ ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ವಿರೋಧಿ ಪ್ರತಿಭಟನೆ ವೇಳೆ, 2020ರ ದೆಹಲಿ ಗಲಭೆ ಪ್ರಕರಣದ ಆರೋಪಿ ಉಮರ್ ಖಾಲಿದ್ ಪರವಾಗಿ ಪೋಸ್ಟರ್ ಪ್ರದರ್ಶಿಸಲಾಗಿದ್ದು, ಈ ಬೆಳವಣಿಗೆ ತೀವ್ರ ವಿವಾದಕ್ಕೆ ಕಾರಣವಾಗಿದೆ. ಪ್ರತಿಭಟನೆಯ ವೇಳೆ ಮಹಿಳೆಯೊಬ್ಬರು 2020ರ ಈಶಾನ್ಯ ದೆಹಲಿ ಗಲಭೆ ಪ್ರಕರಣದ ಆರೋಪಿಗಳಾದ ಉಮರ್ ಖಾಲಿದ್ ಮತ್ತು ಶರ್ಜೀಲ್ ಇಮಾಮ್ ಪರ ಪೋಸ್ಟರ್ ಪ್ರದರ್ಶಿಸಿದ್ದರಿಂದ ಸ್ಥಳದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಯಿತು. ವಿದ್ಯಾರ್ಥಿಗಳ ಪ್ರತಿಭಟನೆ ನಡೆಯುತ್ತಿದ್ದ ವೇಳೆ ಮಹಿಳೆಯೊಬ್ಬರು ಉಮರ್ ಖಾಲಿದ್ ಹಾಗೂ ಶರ್ಜೀಲ್ ಇಮಾಮ್ ಬೆಂಬಲಿಸುವ ಪೋಸ್ಟರ್ ಹಿಡಿದುಕೊಂಡಿದ್ದರು.

# ಜಕ್ಕೂರು ವೈಮಾನಿಕ ತರಬೇತಿ ಕೊನೆಗೂ ಗ್ರೀನ್ ಸಿಗ್ನಲ್

## 203ರವರೆಗೆ ಪರವಾನಗಿ ನವೀಕರಿಸಿದ DGCA..!

### ಮಧ್ಯಮ ವರ್ಗ ಹಾಗೂ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಪೈಲಟ್ ಆಗುವ ಕನಸಿಗೆ ಬಲ ನೀಡುವ ಮಹತ್ವದ ತರಬೇತಿ ಕೇಂದ್ರವಾಗಿದೆ

• ಉದಯವಾಹಿನಿ, ಬೆಂಗಳೂರು

ಜಕ್ಕೂರು ವೈಮಾನಿಕ ತರಬೇತಿ ಶಾಲೆಗೆ ಕೊನೆಗೂ ಡಿಜಿಸಿಎ ಗ್ರೀನ್ ಸಿಗ್ನಲ್ ನೀಡಿದ್ದು, ಇದರ ಬೆನ್ನಲ್ಲೇ ಕಳೆದುಹೋಗಿದ್ದ ವೈಭವ ಮರಳಿ ಪಡೆಯಲು ಶಾಲೆ ಸಜ್ಜಾಗಿದೆ. ವಿಮಾನಯಾನ ನಿಯಂತ್ರಣ ಸಂಸ್ಥೆಯು ಶಾಲೆಯ ಕಾರ್ಯಾಚರಣೆ ಪರವಾನಗಿಯನ್ನು 2031ರ ಜುಲೈ 15 ರವರೆಗೆ ನವೀಕರಿಸಿದೆ.

**1** ವಾಣಿಜ್ಯ ಪೈಲಟ್ ಪರವಾನಗಿ
**2** ಹೆಚ್ಚುವರಿ 10 ಎಕರೆ ಜಮೀನು
**3** 42 ಲಕ್ಷ ಶುಲ್ಕ ನಿಗದಿಯಾಗಿದೆ

ಕಳೆದ ಮೂರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಪೈಲಟ್ ತರಬೇತಿ ಪ್ರಕ್ರಿಯೆಗಳು ಮುಂದಿನ ಒಂದು ತಿಂಗಳೊಳಗೆ ಪುನರಾರಂಭಗೊಳ್ಳಲಿವೆ.

ಈ ನಡುವೆ ಜಕ್ಕೂರು ವೈಮಾನಿಕ ನಿಲ್ದಾಣಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರು, ರನ್‌ವೇ ವಿಸ್ತರಣೆಗಾಗಿ ಹೆಚ್ಚುವರಿ 10 ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳಲಾಗುವುದು ಎಂದು ಹೇಳಿದರು.

ಈ ಸಂಸ್ಥೆ ಮಧ್ಯಮ ವರ್ಗ ಹಾಗೂ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಪೈಲಟ್ ಆಗುವ ಕನಸಿಗೆ ಬಲ ನೀಡುವ ಮಹತ್ವದ ತರಬೇತಿ ಕೇಂದ್ರವಾಗಿದೆ. ಪ್ರಸ್ತುತ ಶಾಲೆಯಲ್ಲಿ ಒಟ್ಟು ಐದು ವಿಮಾನಗಳಿದ್ದು, ಅವುಗಳಲ್ಲಿ ಸೆಸ್ನಾ 172ಪಿ, ಸೆಸ್ನಾ 172ಎಸ್ ಮತ್ತು ಟೆಕ್ನಮ್ ಪಿ2006ಟಿ ಸೇರಿ ಮೂರು ವಿಮಾನಗಳು ಕಾರ್ಯಾಚರಣೆಯಲ್ಲಿವೆ.

ಉಳಿದಿರುವ ಟೆಕ್ನಮ್ ಪಿ2010 ಹಾಗೂ ಸೆಸ್ನಾ 152 ಕೂಡ ಶೀಘ್ರದಲ್ಲೇ ಸೇವೆಗೆ ಸೇರ್ಪಡೆಯಾಗಲಿವೆ ಎಂದು ತಿಳಿಸಿದರು. ಜಕ್ಕೂರು ಏರೋಡ್ರೋಮ್‌ನ ಈಗಿನ 954 ಮೀಟರ್ ಉದ್ದದ ರನ್‌ವೇಯನ್ನು ಇನ್ನೂ 160 ಮೀಟರ್ ವಿಸ್ತರಿಸಲು 10 ಎಕರೆ ಹೆಚ್ಚುವರಿ ಭೂಮಿ ಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವ ಸಿದ್ಧವಾಗಿದೆ ಎಂದು ಹೇಳಿದರು.

ಖಾಸಗಿ ಪೈಲಟ್ ಪರವಾನಗಿ ತರಬೇತಿಗೆ ಕರ್ನಾಟಕದ ಅಭ್ಯರ್ಥಿಗಳಿಗೆ ರೂ.10 ಲಕ್ಷ, ರಾಜ್ಯದ ಹೊರಗಿನ ಅಭ್ಯರ್ಥಿಗಳಿಗೆ ರೂ.15 ಲಕ್ಷ ಶುಲ್ಕ ನಿಗದಿಪಡಿಸಲಾಗಿದೆ.

ವಾಣಿಜ್ಯ ಪೈಲಟ್ ಪರವಾನಗಿ ತರಬೇತಿಗೆ ಕರ್ನಾಟಕದ ಅಭ್ಯರ್ಥಿಗಳಿಗೆ ರೂ.37 ಲಕ್ಷ ಹಾಗೂ ಹೊರರಾಜ್ಯದ ಅಭ್ಯರ್ಥಿಗಳಿಗೆ ರೂ.42 ಲಕ್ಷ ಶುಲ್ಕ ನಿಗದಿಯಾಗಿದೆ. ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳಿಗೆ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುವುದು ಎಂದು ಹೇಳಿದರು.



> ಈ ತರಬೇತಿ ಶಾಲೆಯನ್ನೇ ಮುಚ್ಚಬೇಕು ಎಂಬ ಬೇಡಿಕೆಗಳು ಕೇಳಿಬರುತ್ತಿವೆ. ಆದರೆ, ಸಾವಿರಾರು ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಂಸ್ಥೆಯನ್ನು ಮುಚ್ಚುವ ಪ್ರಶ್ನೆಯೇ ಇಲ್ಲ. ನಿಯಮ ಉಲ್ಲಂಘನೆಗೂ ಅವಕಾಶ ನೀಡುವುದಿಲ್ಲ, ಎಂದು ಹೇಳಿದರು.-ಡಾ. ಜಿ. ಪರಮೇಶ್ವರ್

### ಜಕ್ಕೂರಿಗೆ ಮರಳುವ ವ್ಯವಸ್ಥೆ ಕಲ್ಪಿಸುವ ಕುರಿತು ಚಿಂತನೆ

ಮೈಸೂರಿನಲ್ಲಿ ಉಪ ತರಬೇತಿ ಕೇಂದ್ರ ಸ್ಥಾಪಿಸುವ ಸಾಧ್ಯತೆಯನ್ನೂ ಸರ್ಕಾರ ಪರಿಶೀಲಿಸುತ್ತಿದೆ ಎಂದು ತಿಳಿಸಿದ ಅವರು, ಜಕ್ಕೂರಿನಿಂದ ಹಾರುವ ವಿಮಾನಗಳು ಮೈಸೂರಿನಲ್ಲಿ ಇಳಿದು ಮತ್ತೆ ಜಕ್ಕೂರಿಗೆ ಮರಳುವ ವ್ಯವಸ್ಥೆ ಕಲ್ಪಿಸುವ ಕುರಿತು ಚಿಂತನೆ ನಡೆಯುತ್ತಿದೆ ಎಂದರು.

> ಜಕ್ಕೂರು ಸುತ್ತಮುತ್ತ ಎತ್ತರದ ಕಟ್ಟಡಗಳ ನಿರ್ಮಾಣದ ಬಗ್ಗೆ ಮಾತನಾಡಿದ ಅವರು, ಏರೋಡ್ರೋಮ್‌ನಿಂದ 2.7 ಕಿ.ಮೀ ವ್ಯಾಪ್ತಿಯಲ್ಲಿ 45 ಮೀಟರ್‌ಗಿಂತ ಎತ್ತರದ ಕಟ್ಟಡಗಳಿಗೆ ಅನುಮತಿ ನೀಡಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.-ಡಾ. ಜಿ. ಪರಮೇಶ್ವರ್

## ಬರ ಪರಿಸ್ಥಿತಿ ಎದುರಿಸಲು ಸರ್ಕಾರದ ಬಳಿ ಸಾಕಷ್ಟು ಅನುದಾನವಿದೆ: ಡಾ. ಜಿ. ಪರಮೇಶ್ವರ್

ರಾಜ್ಯದಲ್ಲಿ ತೀವ್ರಗೊಳ್ಳುತ್ತಿರುವ ಬರ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರದ ಬಳಿ ಸಾಕಷ್ಟು ಅನುದಾನ ಲಭ್ಯವಿದ್ದು, ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರು ಹೇಳಿದ್ದಾರೆ.

ಜಕ್ಕೂರು ಏರೋಡ್ರೋಮ್‌ನಲ್ಲಿರುವ ಸರ್ಕಾರಿ ಫ್ಲೈಯಿಂಗ್ ತರಬೇತಿ ಶಾಲೆಯಲ್ಲಿ ವಿಮಾನ ಹಾರಾಟ ತರಬೇತಿ ಮುಂದುವರಿಸುವ ಕುರಿತು ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಕ್ಕಮಗಳೂರಿನಲ್ಲಿ ಬೆಂಗಳೂರು ಕಂದಾಯ ವಿಭಾಗದ ಪ್ರಗತಿ ಪರಿಶೀಲನಾ ಸಭೆ ನಡೆದ ಬಳಿಕ ಮೈಸೂರು ಕಂದಾಯ ವಿಭಾಗದ ಬರ ಪರಿಸ್ಥಿತಿಯನ್ನೂ ಪರಿಶೀಲಿಸಲಾಗುವುದು ಎಂದು ಹೇಳಿದರು.

ಮೈಸೂರು ಕಂದಾಯ ವಿಭಾಗದ ಪರಿಶೀಲನಾ ಸಭೆಯ ದಿನಾಂಕ ಹಾಗೂ ಸ್ಥಳವನ್ನು ಇನ್ನೂ ನಿಗದಿಪಡಿಸಿಲ್ಲ ಎಂದು ತಿಳಿಸಿದ ಅವರು, ರಾಜ್ಯದ ಬಹುತೇಕ ಜಲಾಶಯಗಳು ಕನಿಷ್ಠ ಮಟ್ಟ ತಲುಪಿರುವುದನ್ನು ಒಪ್ಪಿಕೊಂಡರು. ರಾಜ್ಯದ ನಾಲ್ಕು ಕಂದಾಯ ವಿಭಾಗಗಳ ಪರಿಸ್ಥಿತಿಯನ್ನು ಪರಿಶೀಲಿಸಿದ ಬಳಿಕ ಬರದ ಸಂಪೂರ್ಣ ಚಿತ್ರಣ ದೊರೆಯಲಿದೆ.

ಕಂದಾಯ ವಿಭಾಗದ ಪ್ರಗತಿ ಪರಿಶೀಲನಾ ಸಭೆ

ಅದರ ಆಧಾರದ ಮೇಲೆ ಮುಂದಿನ ಕ್ರಮಗಳ ಬಗ್ಗೆ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ ಎಂದು ಹೇಳಿದರು.

ಕುಡಿಯುವ ನೀರಿನ ಸಮಸ್ಯೆ ಎದುರಿಸಲು ರಾಜ್ಯದ ಜಿಲ್ಲಾಧಿಕಾರಿಗಳಿಗೆ ತಲಾ ರೂ.5 ಕೋಟಿ ಅನುದಾನ ನೀಡಲಾಗಿದೆ. ಜೊತೆಗೆ, ಪ್ರತಿ ವಿಧಾನಸಭಾ ಕ್ಷೇತ್ರಕ್ಕೂ ರೂ.1 ಕೋಟಿ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.



## ವಾರ್ಷಿಕ ಆದಾಯ ಮಿತಿ 3 ಲಕ್ಷ ರೂ.ಗೆ ಹೆಚ್ಚಿಸಲು ಸರ್ಕಾರ ನಿರ್ಧಾರ..!

• ಉದಯವಾಹಿನಿ, ಬೆಂಗಳೂರು

ಬಿಪಿಎಲ್ ಕಾರ್ಡ್ ಪಡೆಯಲು ಕಾಯುತ್ತಿರುವ ಲಕ್ಷಾಂತರ ಕುಟುಂಬಗಳಿಗೆ ರಾಜ್ಯ ಸರ್ಕಾರದಿಂದ ಸಿಹಿಸುದ್ದಿ ಸಿಗುವ ಸಾಧ್ಯತೆ ಇದೆ.

ಬಿಪಿಎಲ್ ಕಾರ್ಡ್‌ಗೆ ಅರ್ಹತೆ ಪಡೆಯಲು ಇರುವ ವಾರ್ಷಿಕ ಆದಾಯ ಮಿತಿಯನ್ನು ರೂ.1.20 ಲಕ್ಷದಿಂದ ರೂ.3 ಲಕ್ಷಕ್ಕೆ ಹೆಚ್ಚಿಸುವ ಮಹತ್ವದ ನಿರ್ಧಾರವನ್ನು ಸರ್ಕಾರ ಕೈಗೊಂಡಿದ್ದು, ಆಡಳಿತ ಸುಧಾರಣಾ ಆಯೋಗದ ಶಿಫಾರಸಿನಂತೆ ಈ ಬದಲಾವಣೆಯನ್ನು ಜಾರಿಗೆ ತರಲು ಕ್ರಮ ಆರಂಭಿಸಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದ್ದಾರೆ.

ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ಅವರೊಂದಿಗೆ ಪರಿಶೀಲನಾ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ಆಡಳಿತ ಸುಧಾರಣಾ ಆಯೋಗದ ಶಿಫಾರಸಿನಂತೆ ಬಿಪಿಎಲ್ ಕಾರ್ಡ್‌ಗಳ ಆದಾಯ ಮಿತಿಯನ್ನು ರೂ.3 ಲಕ್ಷಕ್ಕೆ ಹೆಚ್ಚಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಹೇಳಿದರು. ಇದೇ ವೇಳೆ, ರೂ.6,000 ಕೋಟಿ ವೆಚ್ಚದ 'ಇಂದಿರಾ ಕಿಟ್' ಯೋಜನೆಯ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಮುಂದಿನ ಎರಡು ತಿಂಗಳೊಳಗೆ ಕಿಟ್ ವಿತರಣೆ ಆರಂಭವಾಗುವ ನಿರೀಕ್ಷೆಯಿದೆ ಎಂದು ತಿಳಿಸಿದರು. ಇಂದಿರಾ ಕಿಟ್‌ನಲ್ಲಿ 5 ಕೆಜಿ ಅಕ್ಕಿ, ತಲಾ 1 ಕೆಜಿ ತೊಗರಿಬೇಳೆ, ಹೆಸರಿಬೇಳೆ, ಸಕ್ಕರೆ, ಉಪ್ಪು ಹಾಗೂ 1 ಲೀಟರ್ ಅಡುಗೆ ಎಣ್ಣೆ ನೀಡುವ ಪ್ರಸ್ತಾವನೆ ಇದೆ.



ಉದಯವಾಹಿನಿ ಚಿತ್ರ

> ಪಡಿತರ ಚೀಟಿಗಳ ಪರಿಶೀಲನೆ ಕುರಿತು ಸ್ಪಷ್ಟನೆ ನೀಡಿದ ಸಚಿವರು, ಯಾವುದೇ ಪಡಿತರ ಚೀಟಿಯನ್ನು ರದ್ದುಪಡಿಸುವುದಿಲ್ಲ. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅರ್ಹತೆಯಿಲ್ಲದ ಬಿಪಿಎಲ್ ಕಾರ್ಡ್‌ಗಳನ್ನು ಮಾತ್ರ ಎಪಿಎಲ್ ವರ್ಗಕ್ಕೆ ವರ್ಗಾಯಿಸಲಾಗುವುದು ಎಂದು ತಿಳಿಸಿದರು.
> -ಸಚಿವ ಕೆ.ಎಚ್. ಮುನಿಯಪ್ಪ

## ಬಸ್ ಹತ್ತೋದು, ಮೈಕ್ಕೆ ಮುಟ್ಟೋದು! ಕಾಮುಕನಿಗೆ ಮಹಿಳೆ ಧರ್ಮದೇಟು,

• ಉದಯವಾಹಿನಿ, ಬೆಂಗಳೂರು

ಸಾರ್ವಜನಿಕ ಸಾರಿಗೆಯಲ್ಲಿ ಮಹಿಳೆಯರ ಮೇಲಿನ ಕಿರುಕುಳದ ಘಟನೆಗಳು ಆಗಾಗ್ಗೆ ಕೇಳಿಬರುತ್ತಲೇ ಇರುತ್ತವೆ. ಆದರೆ, ಈ ಬಾರಿ ಕಿರುಕುಳ ನೀಡಿದ ಕಾಮುಕನಿಗೆ ಬಸ್‌ನಲ್ಲೇ ಮಹಿಳೆ ಮತ್ತು ಚಾಲಕ ಸೇರಿ ತಕ್ಕ ಪಾಠ ಕಲಿಸಿದ ಘಟನೆ ಬೆಂಗಳೂರಿನಲ್ಲಿ ನಡೆದಿದ್ದು, ಈ ಕುರಿತ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ವೈರಲ್ ಆಗಿದೆ. ವೈರಲ್ ಆಗಿರುವ ವಿಡಿಯೋದ ಪ್ರಕಾರ, ಬಿಎಂಟಿಸಿ 5000/40 ಮಾರ್ಗದ ಬಸ್‌ನಲ್ಲಿ ಮಾನ್ಯತಾ ಟೆಕ್ ಪಾರ್ಕ್ ಕಡೆಗೆ ಸಂಚರಿಸುತ್ತಿದ್ದ ವೇಳೆ ಮಹಿಳಾ ಪ್ರಯಾಣಿಕೆಗೆ ವ್ಯಕ್ತಿಯೊಬ್ಬ ಅನುಚಿತವಾಗಿ ವರ್ತಿಸಿದ್ದಾನೆ ಎನ್ನಲಾಗಿದೆ.ಇದರಿಂದ ಆಕ್ರೋಶಗೊಂಡ ಮಹಿಳೆ ಕೂಡಲೇ ಬಸ್ ಚಾಲಕರಿಗೆ ವಿಷಯ ತಿಳಿಸಿದ್ದು, ಆರೋಪಿಯು ಬಸ್‌ನಿಂದ ತಪ್ಪಿಸಿಕೊಳ್ಳಲು ಯತ್ನಿಸಿದಾಗ ಚಾಲಕ ಬಸ್ ನಿಲ್ಲಿಸಿ ಎರಡೂ ಬಾಗಿಲುಗಳನ್ನು ಮುಚ್ಚಿದ್ದಾರೆ. ಆ ಬಳಿಕ ಮಹಿಳೆ ಆರೋಪಿಗೆ ಧರ್ಮದೇಟು ನೀಡಿದ್ದು, ಬಸ್ ಚಾಲಕ ಕೂಡ ಆರೋಪಿಗೆ ಕಾಲಿನಿಂದ ಒದ್ದು ಹಿಡಿದುಕೊಂಡಿರುವ ದೃಶ್ಯ ವಿಡಿಯೊದಲ್ಲಿ ಕಂಡು ಬಂದಿದೆ. ಚಾಲಕ ಸಮತೋಲನ ಕಳೆದುಕೊಂಡು ಕೆಳಗೆ ಬಿದ್ದರೂ, ಮತ್ತೆ ಎದ್ದು ಆರೋಪಿಯನ್ನು ತರಾಟೆಗೆ ತೆಗೆದುಕೊಂಡಿರುವುದು ವಿಡಿಯೊದಲ್ಲಿ ಕಂಡು ಬಂದಿದೆ.

## ವಿದ್ಯಾರ್ಥಿಗಳು ಕೇಂದ್ರ ಸರ್ಕಾರವನ್ನೇ ಬಗ್ಗಿಸಿ, ಇಡೀ ಪ್ರಪಂಚಕ್ಕೆ ತಮ್ಮ ಶಕ್ತಿ ತೋರಿಸಿದ್ದಾರೆ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸರ್ಕಾರವನ್ನೇ ಬಗ್ಗಿಸಿದ ಶಕ್ತಿ ವಿದ್ಯಾರ್ಥಿಗಳದ್ದು. ಇಡೀ ಪ್ರಪಂಚಕ್ಕೆ ತಮ್ಮ ಶಕ್ತಿ ತೋರಿಸಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ತಿಳಿಸಿದರು.ಇಂದಿರಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಕೇಂದ್ರ ಶಿಕ್ಷಣ ಸಚಿವರು ರಾಜೀನಾಮೆ ವಿಚಾರವಾಗಿ ಪ್ರತಿಕ್ರಿಯಿಸಿ, ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಕೊಟ್ಟಿದ್ದಾರೆ.

ನಾಲ್ಕೈದು ಪುಟಗಳ ಪತ್ರ ಬರೆದಿದ್ದಾರೆ. ಪತ್ರ ಬರೆದು ನಗೆಪಾಟಲಿಗೀಡಾಗಿದ್ದಾರೆ. ಮೌಲಾನಾ ಅಬ್ದುಲ್ ಕಲಾಂ ಶಿಕ್ಷಣ ಸಚಿವರಿದ್ದರು. ಶಾಂತಿನಿಕೇತನವನ್ನು ವಿಶ್ವದರ್ಜೆಗೆ ಕೊಂಡೊಯ್ದಿದ್ದರು. ಆಲಿಘಡ್ ವಿವಿ, ಜೆಎನ್‌ಯು ಶ್ರೇಷ್ಠ ವಿವಿಗಳಾಗಿವೆ.

## ಸೆಲ್ಫ್ ಎಕ್ಸಿಕ್ಯೂಷನ್ ಯೋಜನೆಗಳಲ್ಲಿ ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ ಜಾರ್ಜ್ ಖಡಕ್ ವಾರ್ನಿಂಗ್

• ಉದಯವಾಹಿನಿ, ಬೆಂಗಳೂರು

ಸೆಲ್ಫ್ ಎಕ್ಸಿಕ್ಯೂಷನ್ ಯೋಜನೆಗಳಡಿ ಕಡ್ಡಾಯವಾಗಿ ನಿರ್ಮಿಸಬೇಕಾದ ವಿದ್ಯುತ್ ಮೂಲಸೌಕರ್ಯವನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸದವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಇಂಧನ ಹಾಗೂ ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ಎಚ್ಚರಿಕೆ ನೀಡಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಗಳನ್ನು ಹಾಗೂ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ನಿಯಮಗಳನ್ನು ಉಲ್ಲಂಘಿಸಿದವರ ವಿರುದ್ಧವೂ ಕ್ರಮ ಜರುಗಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2006ರ ಜನವರಿ 12ರಂದು ಜಾರಿಯಾದ ಕೆಇಆರ್‌ಸಿ ನಿಯಮಾವಳಿಯ 3.2.4ನೇ ಕಲಂ ಪ್ರಕಾರ, 7.5 ಎಂವಿಎ ಗಿಂತ ಹೆಚ್ಚಿನ ಮಂಜೂರಾದ ವಿದ್ಯುತ್ ಲೋಡ್ ಹೊಂದಿರುವ ಯೋಜನೆಗಳು ಶಾಶ್ವತ ವಿದ್ಯುತ್ ಸಂಪರ್ಕ ಪಡೆಯುವ ಮುನ್ನ ತಮ್ಮ ಸ್ವಂತ ವೆಚ್ಚದಲ್ಲಿ ಉಪಕೇಂದ್ರ ಸೇರಿದಂತೆ ಅಗತ್ಯ ವಿದ್ಯುತ್ ಮೂಲಸೌಕರ್ಯವನ್ನು ನಿರ್ಮಿಸುವುದು ಕಡ್ಡಾಯವಾಗಿದೆ. ದೊಡ್ಡ ಪ್ರಮಾಣದ ವಸತಿ ಹಾಗೂ ವಾಣಿಜ್ಯ ಯೋಜನೆಗಳು ಅಭಿವೃದ್ಧಿಯಾಗುವ ಸಂದರ್ಭದಲ್ಲಿ ಅಗತ್ಯ ವಿದ್ಯುತ್ ಮೂಲಸೌಕರ್ಯವೂ ಸಮಾನಾಂತರವಾಗಿ ನಿರ್ಮಾಣವಾಗುವಂತೆ ಮಾಡುವುದೇ ಈ ನಿಯಮದ ಉದ್ದೇಶವಾಗಿದೆ. ಇದರಿಂದ ನಗರ ಪ್ರದೇಶಗಳಲ್ಲಿ ನಿರಂತರ ಹಾಗೂ ವಿಶ್ವಾಸಾರ್ಹ ವಿದ್ಯುತ್ ಪೂರೈಕೆ ಸಾಧ್ಯವಾಗಲಿದೆ ಎಂದು ಹೇಳಿದರು. ಈವರೆಗೆ ಬೆಂಗಳೂರು ನಗರದಲ್ಲಿ ಸುಮಾರು 45 ಪ್ರಕರಣಗಳನ್ನು ಗುರುತಿಸಲಾಗಿದ್ದು, ಸಂಬಂಧಪಟ್ಟವರಿಗೆ ನೋಟಿಸ್ ಜಾರಿ ಮಾಡಲಾಗಿದೆ.

ಕೆಇಆರ್‌ಸಿ ನಿಯಮಾವಳಿಯಂತೆ ಶೇ.10ರಷ್ಟು ದಂಡ ವಿಧಿಸಲಾಗುವುದು. ಇದಲ್ಲದೆ, ಆರಂಭದಲ್ಲಿ 7.5 ಎಂವಿಎಗಿಂತ ಕಡಿಮೆ ವಿದ್ಯುತ್ ಲೋಡ್‌ಗೆ ಅನುಮೋದನೆ ಪಡೆದು, ಬಳಿಕ ಅಗತ್ಯ ಮೂಲಸೌಕರ್ಯ ನಿರ್ಮಿಸದೆ ಮಂಜೂರಾದ ಮಿತಿಗಿಂತ ಹೆಚ್ಚಿನ ವಿದ್ಯುತ್ ಬಳಕೆ ಮಾಡುತ್ತಿರುವ ಯೋಜನೆಗಳನ್ನೂ ಕೆಪಿಟಿಸಿಎಲ್ ಗುರುತಿಸಿದೆ ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

# ಗೃಹ ಇಲಾಖೆ ನಡೆಸುವುದು ಹೇಗೆಂದು ಅಮಿತ್ ಶಾ ಕರ್ನಾಟಕ ನೋಡಿ ಕಲಿಯಲಿ

## ಸಾಧನೆ ಶೂನ್ಯವಾಗಿರುವಾಗ ಯಾವುದರ ಬಗ್ಗೆ ರೀಲ್ಸ್ ಮಾಡಬೇಕು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ

• ಉದಯವಾಹಿನಿ, ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೇಶದ ಯುವಕರು, ವಿದ್ಯಾರ್ಥಿಗಳ ಬಗ್ಗೆ ಕಾಳಜಿ, ಬದ್ಧತೆ ಇದ್ದರೆ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆ ಪಡೆಯಬೇಕೆಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಒತ್ತಾಯಿಸಿದ್ದಾರೆ.

ಬೆಂಗಳೂರಿನಲ್ಲಿಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು, 2047ರ ಹೊತ್ತಿಗೆ ವಿಕಸಿತ ಭಾರತ, ಅಮೃತ ಕಾಲ ಮಾಡಬೇಕೆಂದು ಕನಸು ಕಾಣುತ್ತಿದ್ದೀರಿ, ದೇಶದ ಯುವಜನತೆಯನ್ನು ದೂರವಿಟ್ಟು ಮಾಡಲು ಸಾಧ್ಯವಿಲ್ಲ. ಅವರ ಹಿತಾಸಕ್ತಿ ಬಗ್ಗೆ ಕಾಳಜಿ ವಹಿಸಬೇಕು, ನಿಮ್ಮ ರಕ್ಷಣೆಗೆ ನಾವು ನಿಲ್ಲುತ್ತೇವೆ ಮೋದಿಯವರೇ, ಯಾಕೆ ಹೆದರುತ್ತೀರಿ, ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆ ಪಡೆಯಿರಿ ಎಂದರು.

ನನ್ನನ್ನು ಪ್ರತಿದಿನ 'ಟ್ರೋಲ್ ಮಿನಿಸ್ಟರ್' ಎನ್ನುತ್ತಾರೆ. ಆದರೆ ಸ್ವತಃ ಪ್ರಧಾನ ಮಂತ್ರಿಯವರೇ ದೇಶದಲ್ಲಿ ದೊಡ್ಡ ಮಟ್ಟದ ಟ್ರೋಲ್ ಮಾಡುತ್ತಿದ್ದಾರೆ. ಕಳೆದ 10 ವರ್ಷಗಳಲ್ಲಿ 52 ಬಾರಿ ಪೇಪರ್ ಲೀಕ್ ಆಗಿವೆ. 'ಮೇಕ್ ಇನ್ ಇಂಡಿಯಾ', 'ಡಿಜಿಟಲ್ ಇಂಡಿಯಾ', 'ಸ್ಮಾರ್ಟ್ ಸಿಟಿ' ಎಲ್ಲವೂ ವಿಫಲವಾಗಿವೆ. ಸಾಧನೆ ಶೂನ್ಯವಾಗಿರುವಾಗ ಯಾವುದರ ಬಗ್ಗೆ ರೀಲ್ಸ್ ಮಾಡಬೇಕು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದರು. 100 ಸ್ಮಾರ್ಟ್ ಸಿಟಿ ಮಾಡುತ್ತೇನೆಂದು ಹೇಳಿದವರು ಒಂದೂ ಮಾಡಿಲ್ಲ, ದೇಶದ ಸಾಧನೆಯನ್ನು ತೋರಿಸಲಿ ಎಂದರು. ವಿರೋಧ ಪಕ್ಷಗಳ ನಾಯಕರನ್ನು 'ಆಂಟಿ ನ್ಯಾಷನಲ್' ಎಂದು ಕರೆಯಲು ಬಿಜೆಪಿಗರಿಗೆ ಯಾರು ಗುತ್ತಿಗೆ ಕೊಟ್ಟಿದ್ದಾರೆ ಆರ್ ಎಸ್ ಎಸ್ ಕಚೇರಿಯ ಮೇಲೆ ರಾಷ್ಟ್ರಧ್ವಜ ಹಾರಿಸಲು 52 ವರ್ಷಗಳು ಬೇಕಾಯಿತು. ಇವರಿಂದ ನಾವು ದೇಶಭಕ್ತಿಯ ಪಾಠ ಕಲಿಯಬೇಕಿಲ್ಲ. ಗಾಂಧೀಜಿಯನ್ನು ಕೊಂದ ಗೋಡ್ಸೆಯನ್ನು ಪೂಜಿಸುವವರು ದೇಶಭಕ್ತರಾದರೆ, ಗಾಂಧೀಜಿ ಯಾರು? ಅವರ ಕಚೇರಿಗಳಲ್ಲಿ ಯಾರ ಫೋಟೋಗಳಿವೆ ಎಂಬುದು ಎಲ್ಲರಿಗೂ ತಿಳಿದಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಒಂದೇ ಒಂದು ಭಾಗಿಯಾಗದವರು ನಮಗೆ ರಾಷ್ಟ್ರಭಕ್ತಿಯ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಕಿಡಿಕಾರಿದರು.


ಉದಯವಾಹಿನಿ ಚಿತ್ರ

> 56 ಇಂಚಿನ ಎದೆ, ಪಾಕಿಸ್ತಾನಕ್ಕೆ ಪ್ರೀತಿ ತೋರಿಸುತ್ತೇನೆ ಎಂದು ಹೇಳಿಕೊಂಡು ಓಡಾಡುವ ಮೋದಿಯವರು ಮೊದಲು ನಿಮ್ಮ ಜನರಿಗೆ ಪ್ರೀತಿ, ಶಾಂತಿಯನ್ನು ತೋರಿಸಿ ಎಂದು ತಿರುಗೇಟು ನೀಡಿದರು. -ಪ್ರಿಯಾಂಕ್ ಖರ್ಗೆ

### ಅಕ್ಕಿ ಕಳ್ಳತನದಲ್ಲಿ ಬಿಜೆಪಿ ನಾಯಕರಿದ್ದಾರೆ!

ಕಲ್ಯಾಣ ಕರ್ನಾಟಕ ಭಾಗದಲ್ಲಿ ಅನ್ನಭಾಗ್ಯದ ಅಕ್ಕಿಯನ್ನು ಕಾಳಸಂತೆಯಲ್ಲಿ ಕದ್ದು ಫ್ರಾನ್ಸ್, ಯುಎಇ, ಕತಾರ್ ದೇಶಗಳಿಗೆ ಅಕ್ರಮವಾಗಿ ಸಾಗಿಸುತ್ತಿರುವ ಜಾಲದ ಹಿಂದೆ ಬಿಜೆಪಿ ನಾಯಕರೇ ಇದ್ದಾರೆ ಎಂದು ಇದೇ ಸಂದರ್ಭದಲ್ಲಿ ಪ್ರಿಯಾಂಕ್ ಆರೋಪಿಸಿರು. ಅಕ್ಕಿ ಕಳ್ಳತನ ಮಾಡುವವರಿಗೆ ಬಿಜೆಪಿ ಟಿಕೆಟ್ ನೀಡುತ್ತದೆ. ಈ ಪ್ರಕರಣಗಳಲ್ಲಿ ಬಿಜೆಪಿ ನಾಯಕರೇ 01, 02, 03 ಆರೋಪಿಗಳಾಗಿದ್ದು, ಚಾರ್ಜ್‌ಶೀಟ್ ಕೂಡ ಆಗಿದೆ ಎಂದರು. ಈ ವಿಚಾರವಾಗಿ ನಾನು ದಾಖಲೆ ಇಲ್ಲದೆ ಮಾತನಾಡುವುದಿಲ್ಲ. ಇದನ್ನು ತಡೆಯಲು ಹೊಸ ಕಾನೂನು ತರಲು ಆಹಾರ ಸಚಿವ ಮುನಿಯಪ್ಪ ಅವರಿಗೆ ಮನವಿ ಮಾಡಿದ್ದೇನೆ. ಇನ್ನು ಒಂದು ತಿಂಗಳಲ್ಲಿ ಕಠಿಣ ಕ್ರಮ ಕೈಗೊಂಡು ಬ್ರೇಕಿಂಗ್ ನ್ಯೂಸ್ ನೀಡುತ್ತೇನೆ ಎಂದರು. ರಾಜ್ಯದಲ್ಲಿ ಹೆಚ್ಚುವರಿ ಉಪಮುಖ್ಯಮಂತ್ರಿ ಹುದ್ದೆಗಳ ಸೃಷ್ಟಿ ಕುರಿತ ಚರ್ಚೆಯ ಬಗ್ಗೆ ಕೇಳಿದ ಪ್ರಶ್ನೆಗೆ ಅದೆಲ್ಲಾ ನನಗೆ ಗೊತ್ತಿಲ್ಲ. ಒಂದು ಕೆಲಸ ಮಾಡೋಣ, ಸಿಎಂ ಅವರನ್ನು ಬಿಟ್ಟು ಬಾಕಿ ಎಲ್ಲರನ್ನೂ ಡಿಸಿಎಂ ಮಾಡಿಬಿಡೋಣ ಎಂದು ವ್ಯಂಗ್ಯವಾಡಿದರು.

# ಜನ್ಮ ಭೂಮಿ ಸ್ಮರಣೆ ವ್ಯಕ್ತಿಯ ಯಶಸ್ಸಿಗೆ ಪ್ರೇರಣೆ - ಕೆ.ರಾಜು

• ಉದಯವಾಹಿನಿ, ರಾಮನಗರ

ಮನುಷ್ಯ ಎಷ್ಟೆ ಎತ್ತರಕ್ಕೆ ಬೆಳೆದರೂ ಸಹಾ ಜನ್ಮ ನೀಡಿದ ಸ್ಥಳವನ್ನು ನೆನೆಯುವ ವ್ಯಕ್ತಿತ್ವ ಮತ್ತು ತಂದೆ ತಾಯಿ ಋಣ ತೀರಿಸುವ ವ್ಯಕ್ತಿ ಸಮಾಜದಲ್ಲಿ ಉನ್ನತ ಸ್ಥಾನದಲ್ಲಿಯೇ ಇರುತ್ತಾರೆ ಎಂದು ಮಾಜಿ ಶಾಸಕ ಕೆ.ರಾಜು ಹೇಳಿದರು.

ನಗರದ ಕನ್ನಿಕಾ ಮಹಲ್ ಕಲ್ಯಾಣ ಮಂಟಪದಲ್ಲಿ ಸಮಾಜ ಸೇವಕ ಡಾ.ಕೆ.ಆರ್.ಪ್ರದೀಪ್ ಅವರ ಯಶಸ್ಸಿನ ಅಭಿನಂದನಾ ಕೈಪಿಡಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಪ್ರದೀಪ್ ಅವರು ಸಿಎ ಪರೀಕ್ಷೆಯ ಲೆಕ್ಕಶಾಸ್ತ್ರ ವಿಷಯದಲ್ಲಿ ನೂರು ಅಂಕಗಳನ್ನು ಪಡೆದಿರುವುದು ಇದುವರೆಗೆ ದಾಖಲೆಯಾಗಿ ಉಳಿದಿರುವುದು ರಾಮನಗರಕ್ಕೆ ಸಂದ ಗೌರವವಾಗಿದೆ ಮತ್ತು ಇವರ ಸಾಧನೆ ಇಂದಿನ ಯುವ ವಿದ್ಯಾರ್ಥಿಗಳಿಗೆ ದಾರಿ ದೀಪವಾಗಿದೆ ಎಂದು ಹೇಳಿದರು. ನಗರಸಭಾ ಅಧ್ಯಕ್ಷ ಕೆ.ಶೇಷಾದ್ರಿ, ಮಾತನಾಡಿ, ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿರುವ ಪ್ರದೀಪ್ ಅವರು ನಮ್ಮ ರಾಮನಗರದವರು ಎಂಬುದನ್ನು ಹೇಳಿಕೊಳ್ಳುವುದಕ್ಕೆ ಹೆಮ್ಮೆ ಎನ್ನಿಸುತ್ತದೆ.



ಉದಯವಾಹಿನಿ ಚಿತ್ರ

ಇವರು ನಮ್ಮ ಮುಂದಿನ ಪೀಳಿಗೆಗೆ ಒಂದು ದೊಡ್ಡ ದಾರಿಯನ್ನು ಹಾಕಿಕೊಟ್ಟಿದ್ದು, ರಾಮನಗರದ ಜನರ ಪರವಾಗಿ ಪ್ರದೀಪ್ ಅವರಿಗೆ ಪೌರ ಸನ್ಮಾನ ಮಾಡಲಾಗುವುದು ಎಂದು ಹೇಳಿದರು.

ಆರ್ಯವೈಶ್ಯ ಸಭಾ ವತಿಯಿಂದ ಅಭಿನಂದನೆ ಸ್ವೀಕರಿಸಿದ ಡಾ.ಕೆ.ಆರ್.ಪ್ರದೀಪ್ ಮಾತನಾಡಿ, ಜನ್ಮ ಕೊಟ್ಟ ತಾಯಿ, ಜನಿಸಿದ ಊರು ಸ್ವರ್ಗಕ್ಕಿಂತ ಮಿಗಿಲು. ರಾಮನಗರ ಭೂಮಿಯೇ ಒಂದು ಸ್ವರ್ಗ. ಇಲ್ಲಿ ಜನಿಸಿರುವುದೇ ನನ್ನ ಪುಣ್ಯ. ಇಲ್ಲಿನ ಬಾಲ್ಯದ ನೆನಪು ನನ್ನ ಜೀವನದಲ್ಲಿ ಸದಾ ಹಸಿರಾಗಿದೆ. ಇಲ್ಲಿನ ಅರ್ಕಾವತಿ ನದಿಯ ಒಡನಾಟ ಎಂದಿಗೂ ಮರೆಲು ಸಾಧ್ಯವಿಲ್ಲ ಎಂದು ಸ್ಮರಿಸಿದರು.

ನನ್ನ ಸಾಧನೆಗೆ ದೇಶ ಮತ್ತು ವಿದೇಶಗಳಲ್ಲಿ ಹಲವು ಸನ್ಮಾನಗಳು ದೊರೆತಿವೆಯಾದರೂ, ನನ್ನೂರಿನ ಜನರ ನಡುವೆ ದೊರೆಯುತ್ತಿರುವ ಗೌರವ ನನ್ನ ಬದುಕಿನಲ್ಲಿ ಅವಿಸ್ಮರಣೀಯ ಕ್ಷಣ ಎಂದು ಸಂತಸ ವ್ಯಕ್ತಪಡಿಸಿದ ಅವರು, ನಾವು ಜನಿಸಿದ ಭೂಮಿಯ ಇತಿಹಾಸ ಮತ್ತು ಚರಿತ್ರೆಯನ್ನು ನೆನೆಯುವ ವ್ಯಕ್ತಿ ಸಮಾಜದಲ್ಲಿ ಉನ್ನತಮಟ್ಟಕ್ಕೆ ತಲುಪುತ್ತಾರೆ ಎಂಬುದಕ್ಕೆ ನಾನು ಸಾಕ್ಷಿಯಾಗಿದ್ದೇನೆ ಎಂದರು.

**ಸಾಧನೆ ಯುವ ವಿದ್ಯಾರ್ಥಿಗಳಿಗೆ ದಾರಿ ದೀಪ**

ಆರ್ಯ ವೈಶ್ಯ ಸಭಾದ ಬಿ.ಉಮೇಶ್ ಮತ್ತು ದಂಪತಿಗಳು ಹಾಗೂ ಮಹಾಸಭಾದ ಮಹಿಳೆಯರು ಮತ್ತು ಮಕ್ಕಳು ನಡೆಸಿಕೊಟ್ಟ ನೃತ್ಯರೂಪಕ ಗಮನ ಸೆಳೆಯಿತು. ಕಳೆದ ಸಾಲಿನ ಪಿಯೂಸಿ ಪರೀಕ್ಷೆಯಲ್ಲಿ ಶೇ.99(591) ಅಂಕಗಳನ್ನು ಪಡೆದಿದ್ದ ವಿದ್ಯಾರ್ಥಿನಿ ಪಿ.ಎಂ.ಸಿರಿ ಅವರನ್ನು ಕಾರ್ಯಕ್ರಮದಲ್ಲಿ ಗೌರವಿಸಲಾಯಿತು. ಆರ್ಯವೈಶ್ಯ ಸಭಾ ಅಧ್ಯಕ್ಷರಾದ ರವಿಶಂಕರ್, ಉಮಾ, ಅನುರಾಧ ಪ್ರದೀಪ್, ಕೆ.ಆರ್.ನಾಗೇಶ್, ಆರ್.ಜಿ.ಚಂದ್ರಶೇಖರ, ಸುದರ್ಶನ್ ಮತ್ತಿತರರು ಉಪಸ್ಥಿತರಿದ್ದರು.

# ಕೈಕೊಟ್ಟ ಮಳೆ; ಗುಳೆ ಹೊರಟ ರೈತರು: ಹಸು-ಕರುಗಳಿಗೆ ಮೇವು ಸಿಗದೆ ಪರದಾಟ

## ಬಿತ್ತಿದ ಅಲ್ಪಸ್ವಲ್ಪ ಜಮೀನಿನಲ್ಲೂ ಮೊಳಕೆಗಳು ಬಿಸಿಲಿನ ಬೇಗೆಗೆ ಒಣಗಿವೆ.

• ಉದಯವಾಹಿನಿ, ಬಂಗಾರಪೇಟೆ

ಆಗಸದಲ್ಲಿ ಕಪ್ಪು ಮೋಡಗಳು ತೇಲಿ ಬರುತ್ತವೆ. ಆದರೆ, ಮಳೆಯಾಗುವುದಿಲ್ಲ. ಉಳುಮೆಗೆ ಸಿದ್ದಗೊಳಿಸಿದ ಭೂಮಿ ಹದವಿಲ್ಲದೆ ಬಣಗುಡುತ್ತಿದೆ. ಕೆರೆ ಅಂಗಳ ಬಿರುಕು ಬಿಟ್ಟಿವೆ. ಹಸು-ಕರುಗಳಿಗೆ ತುತ್ತು ಮೇವು ಸಿಗದೆ ರೈತರು ಕಣ್ಣೀರು ಹಾಕುತ್ತಿದ್ದಾರೆ. ತಾಲ್ಲೂಕಿನಾದ್ಯಂತ ಭೀಕರ ಬರದ ಚಿತ್ರಣ ಇದು. ತಾಲ್ಲೂಕಿನಲ್ಲಿ ಮುಂಗಾರು ಹಂಗಾಮಿನ ಪ್ರಮುಖ ಆಹಾರ ಬೆಳೆಯಾದ ರಾಗಿ ಹಾಗೂ ಸಾಂಪ್ರದಾಯಿಕ ದ್ವಿದಳ ಧಾನ್ಯಗಳಾದ ತೊಗರಿ, ಅವರೆ ಬಿತ್ತನೆ ಕಾರ್ಯ ಸಂಪೂರ್ಣ ಸ್ಥಗಿತಗೊಂಡಿದೆ.

ನಿರೀಕ್ಷಿತ ಬಿತ್ತನೆ ಪ್ರದೇಶದಲ್ಲಿ ಶೇ 85ರಷ್ಟು ಕೃಷಿ ಭೂಮಿ ಭಣಗುಡುತ್ತಿದೆ. ಸರಿಸುಮಾರು 30 ಸಾವಿರಕ್ಕೂ ಅಧಿಕ ಹೆಕ್ಟೇರ್ ಭೂಮಿ ಪಾಳುಬಿದ್ದಿದೆ. ಮಳೆ ಸೂಚನೆ ಕಂಡು ಸಾಲ-ಸೋಲ ಮಾಡಿ ಬೀಜ, ಗೊಬ್ಬರ ಖರೀದಿಸಿದ್ದ ರೈತರು ಈಗ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಿತ್ತಿದ ಅಲ್ಪಸ್ವಲ್ಪ ಜಮೀನಿನಲ್ಲೂ ಮೊಳಕೆಗಳು ಬಿಸಿಲಿನ ಬೇಗೆಗೆ ಒಣಗಿವೆ.

ತಾಲ್ಲೂಕಿನ ಜೀವನಾಡಿಯಾಗಿದ್ದ ಪ್ರಮುಖ ಕೆರೆಗಳು ಹಾಗೂ ಕುಂಟೆಗಳು ಸಂಪೂರ್ಣವಾಗಿ ಒಣಗಿವೆ. ಕೆರೆಗಳಲ್ಲಿ ಹನಿ ನೀರೂ ಇಲ್ಲದೆ ಅಂಗಳದಲ್ಲಿ ಬಿರುಕುಗಳು ಮೂಡಿವೆ. ಅಂತರ್ಜಲ ಮಟ್ಟ ಭೀಕರವಾಗಿ ಕುಸಿದಿದೆ. 1,200 ರಿಂದ, 1,500 ಅಡಿ ಆಳ ಕೊರೆಸಿದರೂ ನೀರು ಸಿಗುತ್ತಿಲ್ಲ. ಇದ್ದ ಕೊಳವೆಬಾವಿಗಳು ಬತ್ತಿ ಹೋಗಿರುವುದರಿಂದ ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿಗೂ ತೀವ್ರ ಹಾಹಾಕಾರ ಆರಂಭವಾಗಿದೆ. ಮೈಲಿಗಟ್ಟಲೇ ಅಲೆದು ನೀರು ತರುವುದು ಗ್ರಾಮೀಣ ಮಹಿಳೆಯರ ನಿತ್ಯದ ಕಾಯಕವಾಗಿದೆ. ಹೈನುಗಾರಿಕೆ ಸಂಕಷ್ಟ: ಬರಗಾಲದಿಂದಾಗಿ ಹಸಿರು ಮೇವು ಮತ್ತು ನೀರಿನ ತೀವ್ರ ಅಭಾವ


ಉದಯವಾಹಿನಿ ಚಿತ್ರ

**ಎಸಿ ಕೊಠಡಿ ಬಿಟ್ಟು ಹೊರಬನ್ನಿ**

ಉಂಟಾಗಿದೆ. ಹೈನುಗಾರಿಕೆ ಸಂಪೂರ್ಣ ಸಂಕಷ್ಟಕ್ಕೀಡಾಗಿದೆ. ಪಶು ಆಹಾರ ಹಾಗೂ ಒಣ ಮೇವಿನ ಬೆಲೆ ಗಗನಕ್ಕೇರಿದೆ. ಜಾನುವಾರು ನಿರ್ವಹಣೆ ವೆಚ್ಚ ಹೆಚ್ಚಾಗಿದೆ.

ಹಾಲಿನ ಇಳುವರಿ ಕುಸಿದು ರೈತರ ಆದಾಯ ಕಡಿಮೆಯಾಗಿದೆ. ಸಾಕಲಾಗದೆ ದನಕರುಗಳನ್ನು ಮಾರುವ ಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ತಕ್ಷಣ ಉಚಿತ ಮೇವು ಬ್ಯಾಂಕ್ ತೆರೆದು ನೆರವಾಗಬೇಕು ಎಂದು ಹೈನುಗಾರರು ಆಗ್ರಹಿಸಿದ್ದಾರೆ. **ರೇಷ್ಮೆ-ಟೊಮೆಟೊ ಬೆಳೆ ನಷ್ಟ:** ಮಳೆ ಕೊರತೆ ಮತ್ತು ತೀವ್ರ ಬರಗಾಲದ ಪರಿಣಾಮ ರೇಷ್ಮೆ ಹಾಗೂ ಟೊಮೆಟೊ ಬೆಳೆ ತೀವ್ರ ನಷ್ಟ ಉಂಟಾಗಿದೆ. ಇದರಿಂದ ರೈತರಿಗೆ ಕೋಟ್ಯಂತರ ರೂಪಾಯಿ ನಷ್ಟ ಉಂಟಾಗಿದೆ. ನೀರಿನ ಅಭಾವದಿಂದ ಹಿಪ್ಪುನೇರಳೆ ತೋಟಗಳು ಒಣಗಿ, ರೇಷ್ಮೆ ಉತ್ಪಾದನೆ ಕುಸಿದಿದೆ.

ಹೂಡಿಕೆ ಮಾಡಿದ ಬಂಡವಾಳವನ್ನೇ ಕಳೆದುಕೊಂಡಿದ್ದಾರೆ. ತೋಟಗಾರಿಕೆ ಬೆಳೆಗಳು ಹಾಳಾಗಿರುವುದರಿಂದ ರೈತರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ.

> **ದನಕರು ಸಮೇತ ಧರಣಿ ಎಚ್ಚರಿಕೆ 'ರೇಷ್ಮೆ ಮತ್ತು ಟೊಮೆಟೊ ನೆಚ್ಚಿಕೊಂಡು ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿದ್ದೆವು. ನೀರಿನ ಅಭಾವದಿಂದ ಹಿಪ್ಪುನೇರಳೆ ತೋಟಗಳು ಸಂಪೂರ್ಣವಾಗಿ ಎಲೆ ಉದುರಿ ಕಡ್ಡಿಯಾಗಿದೆ. ಟೊಮೆಟೊ ಗಿಡಗಳು ತೋಟದಲ್ಲೇ ಒಣಗಿ ಬೂದಿಯಾಗಿವೆ. ಸರ್ಕಾರ ಕೇವಲ ಸಮೀಕ್ಷೆ ಅಂತ ಕಾಲಹರಣ ಮಾಡದೆ ತಕ್ಷಣವೇ ಬೆಳೆ ನಷ್ಟ ಪರಿಹಾರ ಬಿಡುಗಡೆ ಮಾಡಬೇಕು. ಉಚಿತ ಮೇವು ಬ್ಯಾಂಕ್ ತೆರೆಯದಿದ್ದರೆ ದನಕರು ಸಮೇತ ತಾಲ್ಲೂಕು ಕಚೇರಿ ಮುಂದೆ ಧರಣಿ ಕುಳಿತುಕೊಳ್ಳಬೇಕಾಗುತ್ತದೆ.**
> ತಾಯಪ್ಪ, ಗುಲ್ಲಹಳ್ಳಿ ರೈತ

**ತಾಲ್ಲೂಕಿನಾದ್ಯಂತ ಬರದ ಛಾಯೆ ಆವರಿಸಿದೆ. ಕೇವಲ ಎಸಿ ಕೊಠಡಿಗಳಲ್ಲಿ ಸಭೆ ನಡೆಸಿ ವರದಿ ತರಿಸಿಕೊಳ್ಳುವ ಬದಲು, ಶಾಸಕರು ಮತ್ತು ಜಿಲ್ಲಾ ಉಸ್ತುವಾರಿ ಸಚಿವ ತಕ್ಷಣ ಹಳ್ಳಿಗಳಿಗೆ ಭೇಟಿ ನೀಡಿ ರೈತರು ಹಾಗೂ ಕೂಲಿ ಕಾರ್ಮಿಕರ ನರಕಯಾತನೆ ಕಣ್ಣಾರೆ ನೋಡಬೇಕು ಎಂದು ಕರ್ನಾಟಕ ದಲಿತ ಸಮಾಜ ಸೇನೆ ರಾಜ್ಯ ಘಟಕದ ಅಧ್ಯಕ್ಷ ಸೂಲಿಕುಂಟೆ ಆನಂದ್ ಆಗ್ರಹಿಸಿದ್ದಾರೆ.**

# ಚೌಕಿದಾರನ ಉಸ್ತುವಾರಿಯಲ್ಲೇ ಹುಂಡಿ ಲೂಟಿ

• ಉದಯವಾಹಿನಿ, ಮೈಸೂರು

ಕಿರು ಚೌಕಿದಾರರ ಉಸ್ತುವಾರಿಯಲ್ಲಿ ಶ್ರೀರಾಮನ ಹುಂಡಿಯ ಹಣ ದುರ್ಬಳಕೆಯಾಗಿದ್ದು, ಈ ಸಂಬಂಧ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆ ನಡೆಯಬೇಕು ಎಂದು ಮಾಜಿ ಸಚಿವ ಹಾಗೂ ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ ಆಗ್ರಹಿಸಿದರು. ನಗರದ ಕಾಂಗ್ರೆಸ್ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರಮೋದಿ ಅವರು ನಾನು ತಿನ್ನುವುದಿಲ್ಲ, ಯಾರಿಗೂ ತಿನ್ನಲು ಬಿಡುವುದಿಲ್ಲ.

ನಾನು ಚೌಕಿಧಾರ ಎನ್ನುತ್ತಿದ್ದರು. ಆದರೆ ರಾಮ ಮಂದಿರದಲ್ಲಿನ ಕಿರು ಚೌಕಿದಾರರು ಹುಂಡಿ ಹಣ ಲಪಟಾಯಿಸಿದ್ದಾರೆ. ಇದು ರಾಮ ದೇವರಿಗೆ ಅಪಮಾನ ಮಾಡುವ ಕೆಲಸ. ಈ ಬಗ್ಗೆ ಮೋದಿ ಮಾತನಾಡುವುದಿಲ್ಲ ಎಂದರು. ಬಿಜೆಪಿ ಆರಂಭದಿಂದಲೂ


ಉದಯವಾಹಿನಿ ಚಿತ್ರ

ರಾಮಮಂದಿರ ನೆನಪಾಗಿರಲಿಲ್ಲ. ಅವರು ಲೋಕಸಭೆಯಲ್ಲಿ ಕೇವಲ ಎರಡು ಸ್ಥಾನಗಳಿಸಿದ ಮೇಲೆ ರಾಮಮಂದಿರದ ಕುರಿತು ನಿರ್ಣಯ ಕೈಗೊಂಡು ರಥಯಾತ್ರೆ ನಡೆಸಿದರು. ಆಗ ಮನೆ ಮನೆಗೆ ತೆರಳಿ ಇಟ್ಟಿಗೆ ಪೂಜೆ ಮಾಡಿಸಿ ಪ್ರಮಾಣ ಮಾಡಿಸಿದರು. ನಾನು ಕಂಡಂತೆ ಚಿಕ್ಕಮಗಳೂರಿನ ಅನೇಕ ಕಡೆ ಸಂಗ್ರಹಿಸಿದ್ದ ಇಟ್ಟಿಗೆ ಮೋರಿ ಪಾಲಾಗಿದ್ದವು. ಎಷ್ಟೋ ದಿನಗಳ ಬಳಿಕ ಅದನ್ನು ಸಂಗ್ರಹಿಸಿ ಕೊಂಡೊಯ್ದರು. ಆದರೆ ಈಗ ಕಟ್ಟಿರುವ ರಾಮಮಂದಿರ ಇಟ್ಟಿಗೆಯದಲ್ಲ ಎಂದರು.

ಹಾಗಾದರೆ ಸಂಗ್ರಹಿಸಿದ ಇಟ್ಟಿಗೆ ಏನಾಯಿತು? ಮಂದಿರ ನಿರ್ಮಾಣಕ್ಕೆ ಸಂಗ್ರಹಿಸಿದ ದೇಣಿಗೆ ಎಷ್ಟು ಎಂಬ ಬಗ್ಗೆ ಮಾಹಿತಿ ಇಲ್ಲ. ಈಗ ನಡೆದಿರುವ ಕಳ್ಳತನ ಸುಮಾರು 2 ಸಾವಿರ ಕೋಟಿಗಿಂತ ಹೆಚ್ಚು ಎಂದು ಹೇಳಲಾಗುತ್ತಿದೆ. ಈ ಘಟನೆ ಕೋಟ್ಯಂತರ ಮಂದಿ ರಾಮ ಭಕ್ತರಿಗೆ ಘಾಷಿಯನ್ನುಂಟು ಮಾಡಿದೆ ಎಂದು ಆರೋಪಿಸಿದರು.

> **ಹೀಗಾಗಿ ಕೂಡಲೇ ಸುಪ್ರಿಂ ಕೋರ್ಟ್‌ನ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿಯೇ ತನಿಖೆ ನಡೆಸಬೇಕು. ಅಲ್ಲದೆ ರಾಮಮಂದಿರ ದೇವಸ್ಥಾನದ ಟ್ರಸ್ಟ್‌ಗೆ ಹೊಸ ರೂಪ ನೀಡಬೇಕು. ಪ್ರಕರಣದ ಸತ್ಯಶೋಧನೆ ನಡೆಯಬೇಕು ಎಂದು ಒತ್ತಾಯಿಸಿದರು.**

# ಮೋದಿ ತೆಗಳಿದರೆ ದೇಶದ್ರೋಹಿ ಪಟ್ಟ ಕಟ್ಟಲಾಗುತ್ತಿದೆ ಎಂದ ಶಾಸಕ ಎಚ್.ಡಿ.ರಂಗನಾಥ್

• ಉದಯವಾಹಿನಿ, ಕುಣಿಗಲ್

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವನ್ನು ಹೊಗಳಿದರೆ ದೇಶಪ್ರೇಮಿ, ತೆಗಳಿದರೆ ದೇಶದ್ರೋಹಿ ಪಟ್ಟ ಕಟ್ಟಲಾಗುತ್ತಿದೆ ಎಂದು ಶಾಸಕ ಡಾ. ಎಚ್.ಡಿ.ರಂಗನಾಥ್ ಹೇಳಿದರು. ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ಹಾಗೂ ಕೇಂದ್ರ ಶಿಕ್ಷಣ ಸಚಿವರ ರಾಜೀನಾಮೆಗೆ ಆಗ್ರಹಿಸಿ ಹಮ್ಮಿಕೊಳ್ಳಲಾಗಿದ್ದ ಪಂಜಿನ ಮೆರವಣಿಗೆಗೂ ಮುನ್ನಾ, ದೇಶದಲ್ಲಿ 21 ಲಕ್ಷ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. 21 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿದ್ಯಾರ್ಥಿಗಳಿಗಾದ ಅನ್ಯಾಯ, ಸಾವಿಗೆ ನ್ಯಾಯ ಕೇಳಲು ಹೋದವರಿಗೆ, ಹೋರಾಟ ಮಾಡುತ್ತಿರುವವರಿಗೆ ದೇಶದ್ರೋಹಿ ಪಟ್ಟ ಕಟ್ಟಲಾಗುತ್ತಿದೆ. ಹೋರಾಟವನ್ನು ಹತ್ತಿಕ್ಕುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡುತ್ತಿದೆ ಎಂದು ದೂರಿದರು. ಪ್ರತಿಭಟನೆಯಲ್ಲಿ ನಿರತರಾಗಿರುವ ವಿದ್ಯಾರ್ಥಿಗಳ ಮೇಲಿನ ಹಲ್ಲೆಯನ್ನು ಖಂಡಿಸಿ, ಕೇಂದ್ರ ಸರ್ಕಾರ ಮಾನವೀಯತೆ ಮರೆತಿದೆ.

ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕಾಗಿದ್ದ ಕೇಂದ್ರ ಶಿಕ್ಷಣ ಸಚಿವರ ಪರವಾಗಿ ನಿಂತಿದೆ ಎಂದು ಟೀಕಿಸಿದರು.

# ಚಾಮರಾಜನಗರದಲ್ಲಿ ಕಾಂಗ್ರೆಸ್ ವಿರುದ್ಧ ಬಿಜೆಪಿ ಬೃಹತ್ ಪ್ರತಿಭಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಾಮರಾಜನಗರ

ಕಾಂಗ್ರೆಸ್ ದೇಶ ಹಾಗೂ ರಾಜ್ಯದಲ್ಲಿ ಅರಾಜಕತೆ ಹರಡಿಸುತ್ತಿದೆ ಎಂದು ಆರೋಪಿಸಿ ಜಿಲ್ಲಾ ಬಿಜೆಪಿ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು. ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ಅವರ ನೇತೃತ್ವದಲ್ಲಿ ನಗರದ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿ, ಕಾಂಗ್ರೆಸ್ ರಾಹುಲ್‌ಗಾಂಧಿ, ಡಿ.ಕೆ.ಶಿವಕುಮಾರ್, ಬಿ.ಕೆ.ಹರಿಪ್ರಸಾದ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನಕುಮಾರ್ ಮಾತನಾಡಿ, ದೇಶದಲ್ಲಿ ಅರಾಜಕತೆ ಸೃಷ್ಟಿ ಮಾಡಿ ಆಡಳಿತಕ್ಕೆ ತೊಂದರೆ ಕೊಡುವ ನಿಟ್ಟಿನಲ್ಲಿ ಅನೇಕ ದುಷ್ಟಶಕ್ತಿಗಳು ಯತ್ನಿಸುತ್ತಿವೆ. ಬೆಂಗಳೂರಿನಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದು ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಹೋಗುತ್ತಿದ್ದ ವೇಳೆ ಶಾಸಕ ಹರೀಶ್ ಅವರ ಮೇಲೆ ಮೊಟ್ಟೆ ಎಸೆದಿರುವುದು ಖಂಡನೀಯ. ಯಾವುದೇ ರಾಜಕೀಯ ಪಕ್ಷಗಳು, ಸಂಘಟನೆಗಳು ದೇಶದಲ್ಲಿ ಹೋರಾಟ ಮಾಡಲು ಸಂವಿಧಾನದಲ್ಲಿ ಹಕ್ಕಿದೆ.

ಪ್ರತಿಭಟನೆಯನ್ನು ಹತ್ತಿಕ್ಕಲು ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿರುವುದು ವಿಪರ್ಯಾಸ. ಇದನ್ನು ನೋಡಿ ಬಿಜೆಪಿ ಸುಮ್ಮನೆ ಕೂರುವುದಿಲ್ಲ ಎಂದು ಕಾಂಗ್ರೆಸ್‌ಗೆ ಎಚ್ಚರಿಸಿದರು. ಕಾಂಗ್ರೆಸ್ ನಾಯಕರ ಮೇಲೆ ಸಾರ್ವಜನಿಕರು ಮೊಟ್ಟೆ ಎಸೆಯಲು ಶುರು ಮಾಡಿದರೆ ನೀವು ಏನು ಮಾಡಲು ಸಾಧ್ಯ ಎಂದು ಪ್ರಶ್ನಿಸಿದ ಅವರು ನಿಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ವಿರೋಧ ಪಕ್ಷದವರ ಮೇಲೆ ದೌರ್ಜನ್ಯ ಮಾಡುವುದು ಸರಿಯಲ್ಲ. ಮೊಟ್ಟೆ ಹೊಡೆಯುವ ಸಂಸ್ಕೃತಿಯನ್ನು ಕಾಂಗ್ರೆಸ್‌ನವರು ಕೂಡಲೇ ಬಿಡಬೇಕು.

**ಸರ್ಕಾರ ತೀವ್ರವಾದ ಕಾರ್ಯಾಚರಣೆ**

**ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಪ್ರತಿವರ್ಷವೂ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಮೊನ್ನೆ ನಡೆದ ನೀಟ್ ಪರೀಕ್ಷೆಯಲ್ಲಿ ಪಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂದು ಗೊತ್ತಾದ ತಕ್ಷಣ ಪ್ರಧಾನಿ ನರೇಂದ್ರಮೋದಿ ಅವರ ಸರ್ಕಾರ ತೀವ್ರವಾದ ಕಾರ್ಯಾಚರಣೆ ಮಾಡಿದೆ.**

# ಕಾಂಗ್ರೆಸ್‌ನಿಂದ ವಿದ್ಯಾರ್ಥಿ ಹೋರಾಟ ದುರ್ಬಳಕೆ ಖಂಡಿಸಿ ಬಿಜೆಪಿ ಪ್ರತಿಭಟನೆ

• ಉದಯವಾಹಿನಿ, ಮಂಡ್ಯ:

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ, ನವದೆಹಲಿಯ ಜಂತರ್ ಮಂತರ್ ನಲ್ಲಿ ವಿದ್ಯಾರ್ಥಿ ಗಳು ನಡೆಸಿದ ಹೋರಾಟ ವನ್ನು ಕಾಂಗ್ರೆಸ್ ದುರ್ಬಳಕೆ ಮಾಡಿಕೊಂಡಿದೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನೆಡೆಸಿದರು. ನಗರದ ಜೆ.ಸಿ.ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿ ಕಾಂಗ್ರೆಸ್ ವಿರುದ್ಧ ಧಿಕ್ಕಾರ ಕೂಗಿದ ಬಿಜೆಪಿ ಕಾರ್ಯಕರ್ತರು, ಮಾನವ ಸರಪಳಿ ನಿರ್ಮಿಸಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಯಾವಾಗಲೂ ವಿದ್ಯಾರ್ಥಿಗಳ ಪರ ಇದೆ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದೆ. ಆದರೂ, ಕಾಂಗ್ರೆಸ್ ಕೊಳಕು ರಾಜಕಾರಣ ಮಾಡುತ್ತಿದೆ. ದೇಶದ್ರೋಹಿ ಗಳೊಂದಿಗೆ ಪ್ರತಿಭಟನೆ ನಡೆಸಿ, ಮೋದಿ ಸರ್ಕಾರಕ್ಕೆ ಮಸಿ ಬಳಿಯಲು ಯತ್ನಿಸುತ್ತಿದೆ ಎಂದು ಟೀಕಿಸಿದರು.

ಡಾ.ಲಕ್ಷ್ಮಿ ಅಶ್ವಿನ್ ಗೌಡ ಮಾತನಾಡಿ ರಾಹುಲ್ ಕಳೆದ ಮೂರು ಬಾರಿಯಿಂದ 2014 ರಿಂದ ಸತತವಾಗಿ ಹೀನಾಯ ಸೋಲನ್ನ ಕಂಡಿದ್ದಾರೆ. ಒಂದು ಪಿತೂರಿಯನ್ನ ಮಾಡಿ ಜಂತರ್ ಮಂತರ್‌ನಲ್ಲಿ ವಿದ್ಯಾರ್ಥಿಗಳ ಒಂದು ಈಗ ಹೋರಾಟ ಏನಿದೆ ಒಪ್ಪಿ ಕೊಳ್ಳೋಣ ನೀಟ್ ಪರೀಕ್ಷೆ ಯಲ್ಲಿ ಪ್ರಶ್ನೆ ಪತ್ರಿಕೆ


ಉದಯವಾಹಿನಿ ಚಿತ್ರ

ಸೋರಿಕೆ ಆಗಿತ್ತು ಅದಕ್ಕೆ ಏನು ಮಾಡ ಬೇಕು ನಮ್ಮ ಸರ್ಕಾರ ಸಂವಿಧಾನಾತ್ಮಕವಾಗಿ ತಕ್ಷಣವೇ ಅಲ್ಲಿ ಯಾರು ಪ್ರಶ್ನೆ ಪತ್ರಿಕೆಯ ಸೋರಿಕೆಗೆ ಕಾರಣರಾಗಿದ್ದರು ಅವರನ್ನ ಅರೆಸ್ಟ್ ಮಾಡಿ ಹತ್ತು ವರ್ಷ ಕಠಿಣ ಸಜೆಯನ್ನ ವಿಧಿ ಸುವುದರ ಜೊತೆಗೆ ಫಾಸ್ಟ್ ಟ್ರ್ಯಾಕ್ ಕೋರ್ಟ್ ಗಳನ್ನ ಮಾಡಿದ್ದೇವೆ ಅಂದ್ರೆ ಬೇಗ ನ್ಯಾಯದ ಮುಖಾಂತರ ಇತ್ಯರ್ಥ ವಾಗಲಿ ಎಂದು ತಿಳಿಸಿದರು.

> **ಮೋದಿಯವರ ನೇತೃತ್ವದಲ್ಲಿ ಆಯ್ಕೆಯಾಗಿರುವಂತಹ ಸರ್ಕಾರವನ್ನ ಏನಾದರೂ ಮಾಡಿ ನಾವು ಬೀಳಿಸಬೇಕು ಅಂತ ವಿದೇಶಿಯರ ಜೊತೆ ಸೇರಿಸಿ ನೀವೇನು ಹುನ್ನಾರ ಮಾಡ್ತಿದ್ದೀರಾ ಎಂದು ತಿಳಿಸಿದರು. - ಬಿಜೆಪಿ**

# ಸೆಟ್‌ಬ್ಯಾಕ್ ಕಾನೂನು ಕಟ್ಟುನಿಟ್ಟು ಪಾಲನೆಗೆ ಸಿಎಂಗೆ ಹಿರಿಯ ನಾಗರೀಕರ ಮನವಿ

• ಉದಯವಾಹಿನಿ, ಕೋಲಾರ

ಕರ್ನಾಟಕ ರಾಜ್ಯದ ನಗರಸಭೆ, ಗ್ರಾಮ ಪಂಚಾಯಿತಿ, ಗ್ರಾಮೀಣ ಹಾಗೂ ನಗರ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಮಂಜೂರು ಮಾಡಲಾದ ಕಟ್ಟಡ ನಕ್ಷೆ ಸೆಟ್ ಬ್ಯಾಕ್ ಮತ್ತು ಕಟ್ಟಡದ ಅಳತೆಗಳ ಅನುಗುಣವಾಗಿ ನಗರದಲ್ಲಿ ಕಟ್ಟಡ ನಿರ್ಮಾಣಗಳನ್ನು ನಿರ್ಮಿಸುವುದನ್ನು ಅನುಷನಕ್ಕೆ ಆದ್ಯತೆ ನೀಡದೆ ಇರುವುದರಿಂದ ಬಡಾವಣೆಗಳಲ್ಲಿನ ಅಕ್ಕಪಕ್ಕದವರುಗಳು ಕಿತ್ತಾಡಿಕೊಂಡು ಪೊಲೀಸ್ ಠಾಣೆ ಎಡೆತಾಕುವಂತಾಗಿದ್ದು ಇದನ್ನು ತಡೆಗಟ್ಟು ನಿಯಮಾನು



ಉದಯವಾಹಿನಿ ಚಿತ್ರ

ಸಾರ ಕಟ್ಟಡಗಳ ನಿರ್ಮಾಣಕ್ಕೆ ಮುಂದಾಗುವಂತೆ ಸೂಚಿಸುವಂತೆ ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ ರವರ ಮೂಲಕ ಸರ್ಕಾರಕ್ಕೆ ಹಿರಿಯ ನಾಗರೀಕರ ನಿಯೋಗವು ಮನವಿ ಸಲ್ಲಿಸಿದರು. ನಗರ ಹಾಗೂ ಗ್ರಾಮೀಣ ಪ್ರದೇಶಗಳಿಂದ ಸಾರ್ವಜನಿಕರುಗಳು ವಾಸದ ಮನೆ ಇತರೆ ಕಟ್ಟಡಗಳನ್ನು ನಿರ್ಮಿಸಬೇಕಾದಲ್ಲಿ ಅವರುಗಳು ಹೊಂದಿರುವಂತಹ ಖಾಲಿ ನಿವೇಶನಗಳ ಒಟ್ಟು ಅಳತೆಗೆ ಅನುಗುಣವಾಗಿ ನಿರ್ಮಿಸುವ ಕಟ್ಟಡ ಸುತ್ತ ಮುತ್ತಲಿನ ನಾಲ್ಕು ದಿಕ್ಕುಗಳಲ್ಲಿ ಖಾಲಿ ಬಿಡಬೇಕಾದಂತಹ ಸೆಟ್ ಬ್ಯಾಕ್ ಪ್ರಮಾಣದ ಕುರಿತು ಸರ್ಕಾರದ ಇಲಾಖೆಯು ಹೊರಡಿಸಿರುವ ಜೋನಲ್ ರೆಗ್ಯುಲೇಷನ್ ಬುಕ್ ಪುಸ್ತಕದಲ್ಲಿ ವಿವರವಾಗಿ ತಿಳಿಸಲಾಗಿರುತ್ತದೆ ಆದರೆ ಬಹುತೇಕ ಮಂದಿ ಪಾಲಿಸುತ್ತಿಲ್ಲ ದೂರಿದ್ದಾರೆ. ಖಾಲಿ ನಿವೇಶನದ ವ್ಯಾಪ್ತಿಯಲ್ಲಿ ಬರುವಂತಹ ರಾಜ್ಯದ ಎಲ್ಲಾ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ನಿರ್ಮಿಸಲು ಉದ್ದೇಶಿಸುವಂತಹ ಕಟ್ಟಡದ ನಕ್ಷೆಯಲ್ಲಿ ಸೂಚಿತ ಮಾರ್ಗಸೂಚಿ ಸೆಟ್ ಬ್ಯಾಕ್ ಅಳತೆಗಳನ್ನು ಬಿಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಂಡ ನಂತರ ಕಟ್ಟಡದ ಮೂಲ ನಕ್ಷೆಯನ್ನು ಅನುಮೋದಿಸಿ ಮಂಜೂರಾತಿಯನ್ನು ನೀಡಬೇಕಾಗಿರುತ್ತದೆ ಎಂದು ಕೋರಿದ್ದಾರೆ.

# ಬಗರ್‌ಹುಕುಂ ರೈತರ ಒಕ್ಕಲೆಬ್ಬಿಸುವ ಸರ್ಕಾರದ ಧೋರಣೆ ಖಂಡಿಸಿ ಬೃಹತ್ ಸಮಾವೇಶ

## ಸರ್ಕಾರದಿಂದ ಮಂಜೂರಾದ ಸಾಗುವಳಿ ಭೂಮಿ ಹಕ್ಕಿಗೆ ಧಕ್ಕೆ ಆಗದಂತೆ ಅರಣ್ಯ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ ಮಾಡಬೇಕು,

• ಉದಯವಾಹಿನಿ, ತುಮಕೂರು

ಭೂ ಮಂಜೂರಾತಿ ಪಡೆದ ಬಗರ್‌ಹುಕುಂ ರೈತರನ್ನು ಒಕ್ಕಲೆಬ್ಬಿಸುತ್ತಿರುವ ಸರ್ಕಾರದ ಧೋರಣೆ ಖಂಡಿಸಿ ಜುಲೈ 27ರಂದು ಬೆಳಗ್ಗೆ 11ಕ್ಕೆ ಶಿರಾ ತಾಲ್ಲೂಕಿನ ಬುಕ್ಕಾಪಟ್ಟಣದಲ್ಲಿ ಬೃಹತ್ ಪ್ರತಿಭಟನಾ ಸಮಾವೇಶ ಆಯೋಜಿಸಲಾಗಿದೆ. ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ದಲಿತ ಸಂಘರ್ಷ ಸಮಿತಿ ಸಹಯೋಗದಲ್ಲಿ ಸಾಗುವಳಿ ರೈತರ ಹೋರಾಟ ಸಮಿತಿಯು ಈ ಹೋರಾಟ ರೂಪಿಸಿದೆ.

ಸರ್ಕಾರದಿಂದ ಮಂಜೂರಾದ ಸಾಗುವಳಿ ಭೂಮಿ ಹಕ್ಕಿಗೆ ಧಕ್ಕೆ ಆಗದಂತೆ ಅರಣ್ಯ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ ಮಾಡಬೇಕು, ಅರಣ್ಯ ಇಲಾಖೆ ಸಿಬ್ಬಂದಿ ಬಗರ್‌ಹುಕುಂ ಸಾಗುವಳಿ ಭೂಮಿಯಲ್ಲಿನ ಫಸಲು ನಾಶಪಡಿಸಿದ್ದು ಪರಿಹಾರ ನೀಡಬೇಕು, ಬಗರ್‌ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕು ಎಂದು ಸರ್ಕಾರವನ್ನು ಆಗ್ರಹಿಸಲಾಗುವುದು ಎಂದು ರೈತ ಮುಖಂಡರು ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

ಮೂರು ಎಕರೆ ಒಳಗೆ ಸಾಗುವಳಿ ಮಾಡಿರುವ ರೈತರನ್ನು ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸುವುದಿಲ್ಲ ಎಂದು ಸರ್ಕಾರ ಹೇಳುತ್ತಲೇ ಬಂದಿದೆ. ಆದರೆ, ಸರ್ಕಾರದ್ದೇ ಭಾಗವಾಗಿರುವ ಅರಣ್ಯ ಇಲಾಖೆ ನೂರಾರು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿರುವ ರೈತರ ಮೇಲೆ ದೌರ್ಜನ್ಯ ನಡೆಸುತ್ತಿದೆ.

ಇತ್ತೀಚೆಗೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮುತ್ತುಗದಹಳ್ಳಿ, ಅಂಬ್ರಾಪುರದಲ್ಲಿ ರೈತರಿಗೆ ಮಂಜೂರಾಗಿ ಖಾತೆ ಪಹಣಿ ಇದ್ದ ಭೂಮಿಯಲ್ಲಿ ಬೆಳೆದಿದ್ದ ತೆಂಗು, ಅಡಿಕೆ, ತೋಟಗಾರಿಕೆ ಬೆಳೆ ನೆಲಸಮ ಮಾಡಿದ್ದು ಯಾವ ನ್ಯಾಯ ಎಂದು ಮುಖಂಡರು ಕಿಡಿಕಾರಿದರು.

'ಇಂದಿಗೂ ಖಾತೆ, ಪಹಣಿಯಲ್ಲಿ ಕಂದಾಯ ಇಲಾಖೆ ಎಂದೇ ಬರುತ್ತಿದೆ. ಆದರೂ ಅರಣ್ಯ ಇಲಾಖೆ ದೌರ್ಜನ್ಯ ನಡೆಸಿ ಗಿಡಗಳನ್ನು ಕಿತ್ತು ಹಾಕಿದೆ. ನೊಂದ ರೈತರಿಗೆ ಸಾಂತ್ವನ ಹೇಳುವುದರ ಜತೆಗೆ, ಸರ್ಕಾರಕ್ಕೆ ಸ್ಪಷ್ಟ ಸಂದೇಶ ನೀಡುವ ನಿಟ್ಟಿನಲ್ಲಿ ಜುಲೈ 27ರ ಪ್ರತಿಭಟನಾ ಸಮಾವೇಶ ಮಹತ್ವದ್ದಾಗಿದೆ.

ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಡಾ. ಬಸವರಾಜು, ಮುಖಂಡ ಸಿ.ಯತಿರಾಜು ಮನವಿ ಮಾಡಿದರು.

**ರೈತರಿಗೆ ಭೂಮಿ ಮಂಜೂರು ಮಾಡಿ**

ರಾಜರ ಆಳ್ವಿಕೆ ಮುಗಿದು, ಪ್ರಜಾಪ್ರಭುತ್ವ ಬಂದಿದ್ದರೂ ರಾಜರ ಕಾಲದ ಆದೇಶ ಹಿಡಿದುಕೊಂಡು ಅರಣ್ಯ ಇಲಾಖೆ ಅಧಿಕಾರಿಗಳು ಈ ಭೂಮಿ ನಮಗೆ ಸೇರಿದ್ದು ಎಂದು ದಬ್ಬಾಳಿಕೆ ಮಾಡಿ ರೈತರನ್ನು ಒಕ್ಕಲೆಬ್ಬಿಸುತ್ತಿದ್ದಾರೆ. ಇನ್ನು ಮುಂದೆ ಅದಕ್ಕೆ ಅವಕಾಶ ನೀಡುವುದಿಲ್ಲ' ಎಂದು ಪತ್ರಿಕಾಗೋಷ್ಠಿಯಲ್ಲಿ ಚಿಂತಕ ಕೆ. ದೊರೆರಾಜು ಎಚ್ಚರಿಸಿದರು. ಬಗರ್‌ಹುಕುಂ ಭೂಮಿಗಳ ಪ್ರಕ್ರಿಯೆಗಳನ್ನು ಸರ್ಕಾರ ವೇಗಗೊಳಿಸಬೇಕು.

## ಮಿನಿ ನ್ಯೂಸ್

### ಅಕ್ರಮ ಬಾಂಗ್ಲಾದೇಶಿಗರು ಪತ್ತೆಯಾಗಿಲ್ಲ

• ಉದಯವಾಹಿನಿ, ಮಂಡ್ಯ

ನಾಗಮಂಗಲ ತಾಲ್ಲೂಕಿನ ಸ್ಟಾರ್ ಚಿಕನ್ ಕೋಳಿ ಘಟಕಗಳಲ್ಲಿ ಯಾವುದೇ ಅಕ್ರಮ ಬಾಂಗ್ಲಾದೇಶಿ ಕೆಲಸಗಾರರು ಪತ್ತೆಯಾಗಿಲ್ಲ ಎಂದು ಮಂಡ್ಯ ಜಿಲ್ಲಾ ಪೊಲೀಸರು ತಿಳಿಸಿದ್ದಾರೆ. ದೂರು ಸ್ವೀಕರಿಸಿದ ನಂತರ ಪೊಲೀಸರು ತನಿಖೆ ಆರಂಭಿಸಿದ್ದು, ನಾಗಮಂಗಲ ಉಪವಿಭಾಗದ ಡಿವೈಎಸ್ಪಿಗೆ ತಕ್ಷಣ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿದ್ದಾರೆ. ಸ್ಟಾರ್ ಚಿಕನ್ ಗ್ರೂಪ್ ಆಫ್ ಕಂಪನಿಗಳ ತಪಾಸಣೆಯ ಸಮಯದಲ್ಲಿ, ಪಶ್ಚಿಮ ಬಂಗಾಳ, ಒಡಿಶಾ, ಬಿಹಾರ, ಅಸ್ಸಾಂ, ಛತ್ತೀಸ್‌ಗಢ, ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳ ಕಾರ್ಮಿಕರು ಪತ್ತೆಯಾಗಿದ್ದಾರೆ ಪೊಲೀಸರು ತಿಳಿಸಿದ್ದಾರೆ. 81 ಕಾರ್ಮಿಕರು ಪಶ್ಚಿಮ ಬಂಗಾಳದವರು, 24 ಮಂದಿ ಒಡಿಶಾ, 19 ಮಂದಿ ಬಿಹಾರ, ತಲಾ ಒಂಬತ್ತು ಮಂದಿ ಅಸ್ಸಾಂ ಮತ್ತು ಛತ್ತೀಸ್‌ಗಢದವರು ಮತ್ತು ತಲಾ ಇಬ್ಬರು ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದವರು ಎಂದು ಪೊಲೀಸರು ತಿಳಿಸಿದ್ದಾರೆ. ಪೊಲೀಸರು ಎಲ್ಲಾ ಕಾರ್ಮಿಕರ ಆಧಾರ್ ಕಾರ್ಡ್‌ಗಳು ಮತ್ತು ಮೂಲ ದಾಖಲೆಗಳನ್ನು ಪರಿಶೀಲಿಸಿದರು.

### ಸರ್ಕಾರಿ ನೌಕರರ ವಿರುದ ಅವಹೇಳನ : ಪೊಲೀಸರಿಗೆ ದೂರು


ಉದಯವಾಹಿನಿ ಚಿತ್ರ

• ಉದಯವಾಹಿನಿ,ಮಾಲೂರು

ಸಾಮಾಜಿಕ ಜಾಲತಾಣಗಳು ಹಾಗೂ ಮಾಧ್ಯಮಗಳಲ್ಲಿ ಸರ್ಕಾರಿ ನೌಕರರ ವಿರುದ್ಧ ಸುಳ್ಳು ಆರೋಪ, ಮಾನಹಾನಿಕರ ಹಾಗೂ ಅವಹೇಳನಕಾರಿ ಪೋಸ್ಟ್‌ಗಳನ್ನು ಪ್ರಕಟಿಸುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಸರ್ಕಾರಿ ನೌಕರರು ಪೊಲೀಸರಿಗೆ ಹಾಗೂ ತಹಶೀಲ್ದಾರ್ ಗೆ ಮನವಿ ಸಲ್ಲಿಸಿದರು.

ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಅಜಯ್ ನೇತೃತ್ವದಲ್ಲಿ ತಾಲ್ಲೂಕಿನ ವಿವಿಧ ಇಲಾಖೆಗಳ ಸರ್ಕಾರಿ ನೌಕರರು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಂಘ, ಗ್ರಾಮ ಲೆಕ್ಕಾಧಿಕಾರಿಗಳ ಸಂಘ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಮನವಿ ಸಲ್ಲಿಸಿದರು. ಶಿವಾರಪಟ್ಟಣ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಿಂಡಹಳ್ಳಿ ಗ್ರಾಮದ ಖಾತೆಗೆ ಸಂಬಂಧಿಸಿದ ಪ್ರಕರಣದಲ್ಲಿ ನ್ಯಾಯಾಲಯದ ನಿರ್ದೇಶನದಂತೆ ಪಿಸಿಆರ್ ಪ್ರಕರಣ ದಾಖಲಾಗಿದ್ದು, ಅದರ ತನಿಖೆ ನಡೆಸುವುದು ಪೊಲೀಸರ ಜವಾಬ್ದಾರಿಯಾಗಿದೆ. ಆದರೆ ಕೆಲ ಕಿಡಿಗೇಡಿಗಳು ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ವಿ.ಮುನಿಯಪ್ಪ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ರಾಜಕೀಯ ಪ್ರೇರಿತ, ದ್ವೇಷಪೂರಿತ ಹಾಗೂ ವೈಯಕ್ತಿಕ ನಿಂದನೆ ಮಾಡುವ ಪೋಸ್ಟ್‌ಗಳನ್ನು ಹರಿಬಿಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

### ಚಿಂತಾಮಣಿಯಲ್ಲಿ ಡ್ರಗ್ಸ್ ಬೇಡ ಬ್ರೋ' ಸೌಂಡ್ :ಪೊಲೀಸ್ ಇಲಾಖೆಯಿಂದ ಬೃಹತ್ ಜಾಗೃತಿ ಮೆರವಣಿಗೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಂತಾಮಣಿ

ಚಿಂತಾಮಣಿಯನ್ನು ನಶೆ ಮತ್ತು ಮಾದಕ ವಸ್ತು ಮುಕ್ತ ನಗರವನ್ನಾಗಿ ಮಾಡಲು ಸಾರ್ವಜನಿಕರು ಹಾಗೂ ಆಟೋ ಚಾಲಕರ ಸಹಕಾರ ಅತ್ಯಂತ ಮುಖ್ಯ ಎಂದು ತಹಸೀಲ್ದಾರ್ ಸುದರ್ಶನ ಯಾದವ್ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು ಮನವಿ ಮಾಡಿದ್ದಾರೆ. ನಗರದ ಸರ್ಕಾರಿ ಪಾಲಿಟೆಕ್ನಿಕ್ ಮೈದಾನದಲ್ಲಿ ಪೊಲೀಸ್ ಇಲಾಖೆಯ ವತಿಯಿಂದ ಆಯೋಜಿಸ ಲಾಗಿದ್ದ ಮಾದಕ ವಸ್ತುಗಳ ವಿರೋಧಿ ಜಾಗೃತಿ ಅಭಿಯಾನ ಹಾಗೂ ಮೆರವಣಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅಧಿಕಾರಿಗಳು ಮಾತನಾಡಿದರು. ವ್ಯಸನಿಗಳು ತೆಗೆದುಕೊಳ್ಳುವ ದುರಭ್ಯಾಸದ ವಸ್ತುಗಳಲ್ಲಿ ನಶೆ ಇಲ್ಲ, ನಾವು ಬದುಕುವ ರೀತಿಯಲ್ಲಿ ಮತ್ತು ಸಾಧಿಸುವ ಯಶಸ್ಸಿನಲ್ಲಿ ನಿಜವಾದ ನಶೆ ಇದೆ. ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಿ, ಒಳ್ಳೆಯ ಭವಿಷ್ಯ ರೂಪಿಸಲು ಶ್ರಮಿಸಬೇಕು ಎಂದು ಹೇಳಿದರು.

ಗ್ರಾಮಾಂತರ ಠಾಣೆ ಇನ್ಸ್ಪೆಕ್ಟರ್ ಶಿವರಾಜ್ ಮಾತನಾಡಿ, ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆ ಕುರಿತು ವಿವರಿಸಿದರು. ಮಾದಕ ವಸ್ತುಗಳನ್ನು ತಿರಸ್ಕರಿಸಿ ಎಲ್ಲಾದರೂ ಮಾದಕ ವಸ್ತುಗಳ ಮಾರಾಟ ಕಂಡುಬಂದರೆ ಪೊಲೀಸರಿಗೆ ಮಾಹಿತಿ ನೀಡಿ, ಜಾಗೃತಿ ಅಭಿಯಾನಕ್ಕೆ ಬೆಂಬಲ ನೀಡಿ, ಆರೋಗ್ಯವಂತ ಸಮಾಜದ ಸಬಲೀಕರಣಕ್ಕೆ ಕೈಜೋಡಿಸಿ ಎಂದು ಹೇಳಿದರು. ನಗರಠಾಣೆ ಇನ್ಸ್ಪೆಕ್ಟರ್ ವಿಜಯ ಕುಮಾರ್ ಮಾತನಾಡಿ ಯುವಜನತೆ ಮತ್ತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು 'ಡ್ರಗ್ಸ್ ಬೇಡ ಬ್ರೋ' ಅಭಿಯಾನವನ್ನು ಕೈಗೊಳ್ಳಲಾಗಿದ್ದು, ಸಮಾಜದಲ್ಲಿ ಗೌರವಯುತ ಜೀವನ ನಡೆಸುವುದು ಪ್ರತಿಯೊಬ್ಬರ ಕರ್ತವ್ಯ ಎಂದರು.

### ತಾತಯ್ಯರ ಸನ್ನಿಧಿಯಲ್ಲಿ 72 ಗಂಟೆಗಳ ನಿರಂತರ ನಾದೋಪಾಸನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಂತಾಮಣಿ

ಶ್ರೀಕ್ಷೇತ್ರ ಕೈವಾರದ ಸದ್ಗುರು ಶ್ರೀಯೋಗಿನಾರಾಯಣ ತಾತಯ್ಯರ ಸನ್ನಿಧಿಯಲ್ಲಿ ಜು.27ರಿಂದ 29ರವರೆಗೆ ಶ್ರದ್ಧಾಭಕ್ತಿಗಳಿಂದ ಗುರುಪೂಜಾ ಸಂಗೀತೋತ್ಸವ ಆಚರಿಸಲಾಗುವುದೆಂದು ಕೈವಾರ ಶ್ರೀಯೋಗಿನಾರೇಯಣ ಮಠದ ಸಂಕೀರ್ತನಾ ಯೋಜನೆ ಸಂಚಾಲಕ ವಾನರಾಶಿ ಬಾಲಕೃಷ್ಣ ಭಾಗವತರ್ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸದ್ಗುರು ಕೈವಾರ ತಾತಯ್ಯರ 300ನೇ ಜಯಂತಿ ವರ್ಷಪೂರ್ತಿ ಶ್ರೀಮಠದ ವತಿಯಿಂದ ಆಚರಿಸಲಾಗುತ್ತಿದ್ದು, ಈ ಸಂಗೀತೋತ್ಸವವು ಈ ಭಾಗದ ಪ್ರಮುಖ ಸಾಂಸ್ಕ ತಿಕ ಹಬ್ಬವಾಗಿದೆ. ಜು.27ರಂದು ಧರ್ಮಾಧಿಕಾರಿ ಡಾ.ಎಂ. ಆರ್.ಜಯರಾಮ್ ನೇತೃತ್ವದಲ್ಲಿ ಸಾಮೂಹಿಕ ನಾಮ ಸಂಕೀರ್ತನೆಯೊಂದಿಗೆ ಸಂಗೀತೋತ್ಸವಕ್ಕೆ ಚಾಲನೆ ನೀಡಲಾಗುತ್ತದೆ. ಮಹಾಲಿಂಗಯ್ಯ ಮಠದ್ ತಂಡ ದಿಂದ ಗಾಯನ, ಹಾಗೂ ಬೆಂಗಳೂರಿನ ವಿನಯ್‌ಶರ್ಮ ಮತ್ತು ತಿರುಪತಿಯ ಬಿ.ರಘುನಾಥ್ ರಿಂದ ಗಾಯನ ಕಾರ್ಯಕ್ರಮ ಜರುಗಲಿದೆ. ಜು.28ರಂದು ಸುಮಂತ್ ಹಾಗೂ ಮಾಳವಿರಿಂದ ಪಿಟೀಲು ಸೋಲೋ, ಶಂಕರ್ ನಂಬೂದರಿ ಅವರಿಂದ ಗಾಯನ, ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ತಂಡದಿಂದ ಗಾಯನ, ಕೂಚಿಪುಡಿ ನೃತ್ಯರೂಪಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

